ಕರ್ನಾಟಕ ಸರ್ಕಾರ

# ಉನ್ನತ ಶಿಕ್ಷಣ ಇಲಾಖೆ

# ಹಾಗೂ

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

## ಕನ್ನಡ ಪಠ್ಯರಚನಾ ತಜ್ಞಸಮಿತಿಯ ವರದಿ

**5 ಮತ್ತು 6ನೇ ಸೆಮಿಸ್ಟರ್ ಪಠ್ಯ ಕ್ರಮ ವಿವರ**

# ವಿಶ್ವದೊಳ್ನುಡಿಯಾಗಿ ಕನ್ನಡವು ಕನ್ನಡವ ಕನ್ನಡಿಸುತಿರಬೇಕು

–ವರಕವಿ ದ.ರಾ. ಬೇಂದ್ರೆ

<table>
<tr><td colspan="4">ಅಧ್ಯಕ್ಷರು<br>ಡಾ. ಡಿ.ವಿ.ಪರಮಶಿವಮೂರ್ತಿ<br>(ಕುಲಪತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಹೊಸಪೇಟೆ, ವಿಜಯನಗರ ಜಿಲ್ಲೆ)</td></tr>
<tr><td colspan="4">ಸದಸ್ಯರು</td></tr>
<tr><td>1</td><td>ಡಾ.ವಿಜಯಕುಮಾರಿ ಎಸ್. ಕರಿಕಲ್, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು</td><td>2</td><td>ಡಾ. ಟಿ. ಎಂ. ಭಾಸ್ಕರ್, ಕುಲಪತಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ ತಾಲೂಕು ಹಾವೇರಿ ಜಿಲ್ಲೆ</td></tr>
<tr><td>3</td><td>ಡಾ. ಸಿ. ನಾಗಭೂಷಣ, ಪ್ರಾಧ್ಯಾಪಕರು ಮತ್ತು ಡೀನ್, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು</td><td>4</td><td>ಡಾ. ಕೆ. ಅಭಯಕುಮಾರ್, ಕನ್ನಡ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು</td></tr>
<tr><td>5</td><td>ಡಾ.ಎಚ್. ಟಿ. ಪೋತೆ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರ್ಗಿ</td><td>6</td><td>ಡಾ. ಪ್ರಶಾಂತ್ ನಾಯಕ ಜಿ., ಕನ್ನಡ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ</td></tr>
<tr><td>7</td><td>ಡಾ. ಮಹೇಶ್ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಸ್.ಡಬ್ಲ್ಯೂ ವಿಶ್ವವಿದ್ಯಾಲಯ, ವಿಜಯಪುರ</td><td>8</td><td>ಡಾ. ಆಶಾದೇವಿ ಎಂ.ಎಸ್., ಪ್ರಾಧ್ಯಾಪಕರು, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು</td></tr>
<tr><td>9</td><td>ಡಾ. ಎಸ್. ಎಂ. ಗಂಗಾಧರಯ್ಯ, ಪ್ರಾಧ್ಯಾಪಕರು, ಕನ್ನಡ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ</td><td>10</td><td>ಡಾ.ಎಂ.ಡಿ. ಒಕ್ಕುಂದ, ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ದಾಂಡೇಲಿ</td></tr>
<tr><td>11</td><td>ಡಾ. ಲಿಂಗರಾಜಯ್ಯ<br>ವಿವೇಕಾನಂದ ಪದವಿ ಕಾಲೇಜು, ಬೆಂಗಳೂರು</td><td>12</td><td>ಡಾ. ಶೈಲಜಾ ಕೊಪ್ಪರ್<br>ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕಲಬುರ್ಗಿ</td></tr>
<tr><td>13</td><td>ಡಾ. ಎಚ್. ಎಸ್. ರಘುನಾಥ್, ಪ್ರಾಧ್ಯಾಪಕರು, ಸರ್ ಎಂ.ವಿ.ಸರ್ಕಾರಿ ವಿಜ್ಞಾನ ಕಾಲೇಜು, ಭದ್ರಾವತಿ</td><td>14</td><td>ಡಾ. ಮಾಧವ, ಮುಖ್ಯಸ್ಥರು, ಕನ್ನಡ ವಿಭಾಗ, ವಿಶ್ವವಿದ್ಯಾಲಯ ಕಾಲೇಜು, ಮಂಗಳೂರು</td></tr>
<tr><td>15</td><td>ಡಾ. ಎಚ್. ಎನ್. ಚನ್ನಪ್ಪಗೋಳ<br>ಕೆಎಲ್ಇ ಲಿಂಗರಾಜ ಕಾಲೇಜು, ಬೆಳಗಾವಿ.</td><td>16</td><td>ಡಾ. ಕೆ. ರವೀಂದ್ರನಾಥ, ಪ್ರಾಧ್ಯಾಪಕರು, ಹಸ್ತಪ್ರತಿಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ,</td></tr>
</table>

| | | | |
|---|---|---|---|
| | | | ಹಂಪಿ |
| 17 | **ಡಾ. ಕೆ. ಮಾಧವ ಪೆರಾಜೆ,** ಪ್ರಾಧ್ಯಾಪಕರು, ದ್ರಾವಿಡಿಯನ್ ಸ್ಟಡೀಸ್, ಕನ್ನಡ ವಿಶ್ವವಿದ್ಯಾಲಯ, ಹಂಪಿ | 18 | **ಡಾ. ಕೆ. ಸಿ. ಶಿವಾರೆಡ್ಡಿ,** ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ,ಪ್ರಾದೇಶಿಕ ಕಛೇರಿ, ಬೆಂಗಳೂರು |
| 19 | **ಡಾ. ಎನ್. ಆರ್. ಲಲಿತಾಂಬ** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ವಿಜಯನಗರ, ಬೆಂಗಳೂರು | 20 | **ಡಾ. ಎನ್. ಶೋಭಾರಾಣಿ,** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು. |
| 21 | **ಡಾ. ಮಲ್ಲಿಕಾರ್ಜುನ ಕೆ.,** ಸಹ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ | 22 | **ಡಾ. ಎಚ್.ಪಿ. ಗೀತಾ,** ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯನಗರ, ಮೈಸೂರು |
| 23 | **ಡಾ.ಸೋಮಣ್ಣ,** ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾಲಯ, ಕೊಣಜೆ | 24. | **ಡಾ.ಎಸ್.ಎಸ್. ಅಂಗಡಿ,** ಪ್ರಾಧ್ಯಾಪಕಕರು ಹಾಗು ಮುಖ್ಯಸ್ಥರು, ಆ.ನೇ.ಉಪಾಧ್ಯೆ ಸಂಶೋಧನ ಕೇಂದ್ರ, ಬೆಳಗಾವಿ |
| 25 | **ಡಾ. ಹೆಚ್. ಜಿ. ಶ್ರೀಧರ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿವೇಕಾನಂದ ಕಾಲೇಜು, ಪುತ್ತೂರು | 26 | **ಡಾ.ನಾಗೇಂದ್ರ ಮಸೂತಿ,** ಸಹ ಪ್ರಾಧ್ಯಾಪಕರು, ವಿ.ಜಿ. ಮಹಿಳಾ ಕಾಲೇಜು, ಕಲಬುರಗಿ |
| 27 | **ಡಾ. ಧನಂಜಯ ಕುಂಬಳೆ,** ಕನ್ನಡ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು | 28 | **ಡಾ. ಲಕ್ಷ್ಮೀಕಾಂತ ಪಂಚಾಳ,** ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ರಾಂಪೂರ, ಬಾಗಲಕೋಟೆ |
| **ವಿಶೇಷ ಅಧಿಕಾರಿ** | | | |
| 26 | **ಡಾ. ಗಾನ ಶ್ರುತಿ ಎಂ.ಕೆ.,** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ, ಬೆಂಗಳೂರು | | |

**Course Articulation Matrix: Mapping of Course Outcomes (COs) with Program Outcomes (POs 1-12)**

| Sl. No. | Course Outcomes (COs) / Program Outcomes (POs) | 1 ಬಿ.ಎ | 2 ಬಿ.ಎಸ್ಸಿ | 3 ಬಿ.ಕಾಂ | 4 ಬಿ.ಬಿ.ಎ ಬಿ.ಬಿ.ಎಂ | 5 ಬಿ.ಸಿ.ಎ | 6 ಬಿ.ಎಸ್ಸಿ (ಫ್ಯಾಡ್) | 7 ಐಚ್ಛಿಕ ಕನ್ನಡ | 8 ಕನ್ನಡೇತರರಿಗೆ ಕನ್ನಡ | 9 ಮುಕ್ತ ಆಯ್ಕೆ ಕನ್ನಡ | 10 | 11 | 12 |
|---|---|---|---|---|---|---|---|---|---|---|---|---|---|
| 1 | ವಿವಿಧ ಬರಹಗಾರರು, ಸಾಹಿತ್ಯ ಕೃತಿಗಳು ಮತ್ತು ಸಾಹಿತ್ಯ ಚಳುವಳಿಗಳ ಅರಿವು ಹೆಚ್ಚಿಸಿಕೊಳ್ಳುವುದು. | ✓ | ✓ | ✓ | | ✓ | | | ✓ | | | | |
| 2 | ವಿವಿಧ ಸಾಹಿತ್ಯ ಪ್ರಕಾರಗಳ ರೂಪ–ಸ್ವರೂಪಗಳ ಬಗೆಗೆ ತಿಳುವಳಿಕೆ ಪಡೆಯುವುದು. | | ✓ | | ✓ | | ✓ | | ✓ | | | | |
| 3 | ಭಾಷೆ–ಸಾಹಿತ್ಯದ ಶ್ರೀಮಂತಿಕೆಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಮೂಡಿಸಿಕೊಳ್ಳುವುದು. | ✓ | ✓ | ✓ | | ✓ | | ✓ | | | | | |
| 4 | ಸಾಹಿತ್ಯ ಮೂಲಕ ಸಮಾಜೋ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ತಿಳುವಳಿಕೆಯನ್ನು ಹೊಂದುವುದು. | ✓ | ✓ | ✓ | ✓ | | ✓ | | | | | | |
| 5 | ವೈಚಾರಿಕ – ವೈಜ್ಞಾನಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವುದು | ✓ | ✓ | ✓ | ✓ | | ✓ | ✓ | ✓ | | | | |
| 6 | ಭಾಷಾ ಕೌಶಲ್ಯವನ್ನು ಬೆಳೆಸಿಕೊಳ್ಳುವುದು. | ✓ | | ✓ | | ✓ | ✓ | ✓ | | | | | |
| 7 | ಸಾಹಿತ್ಯದ ಓದು, ತಿಳುವಳಿಕೆ ಹಾಗೂ | ✓ | ✓ | | ✓ | | ✓ | | | | | | |

| | | | | | | | | | | | | | |
|---|---|---|---|---|---|---|---|---|---|---|---|---|---|
| | ಬರವಣಿಗೆಯನ್ನು ರೂಢಿಸಿಕೊಳ್ಳುವುದು. | | | | | | | | | | | | |
| 8 | ನಾಡು–ನುಡಿಯನ್ನು ಕುರಿತ ಅರಿವನ್ನು ಹೆಚ್ಚಿಸಿಕೊಳ್ಳುವುದು. | ✓ | ✓ | ✓ | | | ✓ | | ✓ | | | | |
| 9 | ಸಮಕಾಲೀನ ವಿದ್ಯಮಾನಗಳ ಅರಿವು | ✓ | ✓ | ✓ | ✓ | | ✓ | ✓ | | | | | |
| 10 | ಸಾಮಾಜಿಕ ಹೊಣೆಗಾರಿಕೆಯ ಅರಿವು. | ✓ | ✓ | | ✓ | | ✓ | | ✓ | | | | |
| 11 | ಸದೃಢ ಬೌದ್ಧಿಕ ವ್ಯಕ್ತಿತ್ವ ನಿರ್ಮಾಣ. | ✓ | | ✓ | ✓ | ✓ | | ✓ | | | | | |

**ಆಂತರಿಕ ಮೌಲ್ಯಮಾಪನ ಮತ್ತು ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷಾ ವಿಧಾನದ ಸಲಹೆ ಮತ್ತು ಮಾದರಿ:**

ಈ ಸಮಿತಿಯು ಆಂತರಿಕ (ಸಿಐಇ) ಹಾಗು ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷೆ (ಎಸ್ಇಇ)ಗಳ ವಿಧಾನವನ್ನು ಕುರಿತಂತೆ ಈ ಕೆಳಗಿನ ಸಲಹೆ ನೀಡಲು ಬಯಸುತ್ತದೆ. ಪಠ್ಯ ಚೌಕಟ್ಟು ಸಮಿತಿ ಸೂಚನೆಯಂತೆ ಆಂತರಿಕ ಮೌಲ್ಯಮಾಪನವು ಶೇ.40(ಸಿಐಇ) ಅಂಕಗಳನ್ನು ಹಾಗು ಸೆಮಿಸ್ಟರ್ ಕೊನೆಯ ಪರೀಕ್ಷೆಯು ಶೇ.60(ಎಸ್ಇಇ)ಅಂಕಗಳ ನಿಯಮವನ್ನು ಈ ಕೆಳಗಿನ ಮಾನದಂಡಗಳನ್ನು ಅನುಸರಿಸಿ ಮಾಪನ ಮಾಡಲು ಸೂಚಿಸುತ್ತದೆ.

| ಕ್ರ.ಸಂ. | ಪರೀಕ್ಷಾ ಮಾನದಂಡಗಳು | ಅಂಕಗಳು |
|---|---|---|
| | ಆಂತರಿಕ ನಿರಂತರ ಮೌಲ್ಯಮಾಪನ (ಸಿಐಇ) | |
| **1** | **ನಿರಂತರ ಮತ್ತು ಸಮಗ್ರ ಮೌಲ್ಯಮಾಪನ(ಸಿಸಿಇ)** | **20** |
| **2** | **ಆಂತರಿಕ ಮೌಲ್ಯಮಾಪನ ಪರೀಕ್ಷೆಗಳು** | **20** |
| | **ಒಟ್ಟು ಸಿಐಇ( 1+2)** | **40** |
| **3** | **ಸೆಮಿಸ್ಟರ್ ಅಂತ್ಯದ ಪರೀಕ್ಷೆ ( ಎಸ್ಇಇ)** | **60** |
| | **ಒಟ್ಟು ( ಸಿಐಇ ಮತ್ತು ಎಎಸ್ಇಇ)=** | **100** |

| ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು<br>ಸೆಮಿಸ್ಟರ್ ಕೋರ್ಸ್ ಪಟ್ಟಿ – ಐಚ್ಛಿಕ ಕನ್ನಡ. | | | |
|---|---|---|---|
| V | DSC | KAN C9 | ಕನ್ನಡ ವ್ಯಾಕರಣ ಪರಂಪರೆ: ಶಬ್ದಮಣಿದರ್ಪಣ (ಅಕ್ಷರ–ಸಂಧಿ–ನಾಮ) (ಕ್ರೆಡಿಟ್ 04)<br>ಘಟಕ–01: ಕನ್ನಡ ವ್ಯಾಕರಣ ಪರಂಪರೆ (ಅರ್ಥ, ವ್ಯಾಖ್ಯೆ, ಸ್ವರೂಪ, ಪ್ರಯೋಜನ)<br>ಘಟಕ–02: ಅಕ್ಷರ ಪ್ರಕರಣ |

**1) ನಿರಂತರ ಮತ್ತು ಸಮಗ್ರ ಮೌಲ್ಯಮಾಪನ (ಸಿಸಿಇ)**

ಈ ವಿಧಾನಕ್ಕೆ 20 ಅಂಕಗಳನ್ನು ನಿಗದಿಪಡಿಸಿದ್ದು, ತರಗತಿಯೊಳಗಿನ ವಿದ್ಯಾರ್ಥಿಯ ವಿಚಾರ ಸಂಕಿರಣ (05 ಅಂಕಗಳು), ಗೃಹ ನಿಯೋಜಿತ ಕಾರ್ಯ (05 ಅಂಕಗಳು), ಗುಂಪು ಚರ್ಚೆ (05 ಅಂಕಗಳು) ಮತ್ತು ಹಾಜರಾತಿ (05ಅಂಕಗಳು) ಅಥವಾ ಇತರೆ ಯಾವುದೇ ಮಾನದಂಡಗಳನ್ನು ರೂಪಿಸಿಕೊಳ್ಳಬಹುದು.

**2) ಆಂತರಿಕ ಮೌಲ್ಯಮಾಪನ ಪರೀಕ್ಷೆಗಳು (ಐಎಟಿ)**

ಈ ಭಾಗದಲ್ಲಿ ಒಂದು ಸೆಮಿಸ್ಟರ್ ಅವಧಿಗೆ ಎರಡು ಆಂತರಿಕ ಪರೀಕ್ಷೆಗಳನ್ನು ನಡೆಸುವುದು.ಪ್ರತಿ ಪರೀಕ್ಷೆಯನ್ನು 25+25 ಅಂಕಗಳಿಗೆ ಏರ್ಪಡಿಸಿ ಇವುಗಳನ್ನು 10+10 ಅಂಕಗಳಿಗೆ ಸಮೀಕರಿಸಿ–ಕೊಳ್ಳುವುದು ಅಥವಾ ಬೇರೆ ಯಾವುದೇ ಮಾನದಂಡಗಳ ಮೂಲಕ ಆಂತರಿಕ ಪರೀಕ್ಷೆಗಳನ್ನು ನಡೆಸಬಹುದು.

**3) ಸೆಮಿಸ್ಟರ್ ಅಂತ್ಯದ ಪರೀಕ್ಷೆ (ಎಸ್ಇಇ)**

ಈ ವಿಧಾನವು 60 ಅಂಕಗಳ ಲಿಖಿತ ಪರೀಕ್ಷೆಗಳಿಂದ ಕೂಡಿರುತ್ತದೆ.ಈ ಪರೀಕ್ಷೆಯು ಆಯಾ ವಿಶ್ವವಿದ್ಯಾಲಯಗಳು ಹಾಗೂಸ್ವಾಯತ್ತ(ಅಟಾನಮಸ್)ಕಾಲೇಜುಗಳ ಪರೀಕ್ಷಾ ನಿಯಮಾನುಸಾರ ನಡೆಯುವುದರಿಂದ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಪರೀಕ್ಷಾ ಅರ್ಹತೆಗಳನ್ನು ವಿದ್ಯಾರ್ಥಿಯು ಪರಿಪೂರ್ಣಗೊಳಿಸಬೇಕು.ನಂತರ ಆಯಾ ವಿಶ್ವವಿದ್ಯಾಲಯಗಳ ಬಿಓಎಸ್‌ಗಳು, ಬಿಓಇ ಸದಸ್ಯರು ರೂಪಿಸುವ ಮಾನದಂಡಗಳಂತೆ ಪರೀಕ್ಷೆ ನಡೆಯಲಿದೆ.

| | | | |
|---|---|---|---|
| | | | **ಘಟಕ–03: ಸಂಧಿ ಪ್ರಕರಣ**<br>**ಘಟಕ–04: ನಾಮ ಪ್ರಕರಣ**<br>(ಈ ಮೇಲಿನ ಪ್ರಕರಣಗಳ ಸೂತ್ರಗಳನ್ನು ವಿಷಯಕ್ಕನುಗುಣವಾಗಿ ಆಯ್ಕೆ ಮಾಡಿ ಬೋಧಿಸುವುದು)<br>**ಪರಾಮರ್ಶನ ಗ್ರಂಥಗಳು**<br>1. ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ, ಸಂ: ಡಿ.ಎಲ್.ನರಸಿಂಹಾಚಾರ್<br>2. ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ, ಸಂ: ಎಲ್.ಬಸವರಾಜು<br>3. ಕನ್ನಡ ಭಾಷೆ ಮತ್ತು ವ್ಯಾಕರಣ ಒಂದು ವಿವೇಚನೆ : ಕೆ. ಕುಶಾಲಪ್ಪಗೌಡ<br>4. ಕನ್ನಡ ವ್ಯಾಕರಣ ಮತ್ತು ಭಾಷೆ – ವ್ಹಿ.ಜಿ.ಪೂಜಾರ<br>5. ಕೇಶಿರಾಜನ ಶಬ್ದಮಣಿದರ್ಪಣ ವಿಳಾಸ– ವಿ. ಶಿವಾನಂದ<br>6. ಹಳಗನ್ನಡ ವ್ಯಾಕರಣ–ಟಿ.ವಿ.ವೆಂಕಟಾಚಲಶಾಸ್ತ್ರಿ<br>7. ಕನ್ನಡ ಕೈಪಿಡಿ, ಸಂಪುಟ–1 : ಕೆ.ವಿ.ಪುಟ್ಟಪ್ಪ (ಪ್ರ.ಸಂ.)<br>8. ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ: ಎಂ.ಎಚ್.ಕೃಷ್ಣಯ್ಯ<br>9. ಭಾಷೆ ವಿಶ್ವಕೋಶ: ಕೆ.ವಿ.ನಾರಾಯಣ(ಸಂ)<br>10. ಪ್ರಾಚೀನ ಕನ್ನಡ ವ್ಯಾಕರಣಗಳು : ಎಂ.ವಿ.ಸೀತಾರಾಮಯ್ಯ<br>11. ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ :ಡಿ.ಎನ್.ಶಂಕರಭಟ್ಟ<br>12. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ : ಡಿ.ಎನ್.ಶಂಕರಭಟ್ಟ<br>13. ಕನ್ನಡ ವ್ಯಾಕರಣ ಪರಂಪರೆಯ ಮೇಲೆ ಸಂಸ್ಕೃತದ ಪ್ರಭಾವ: ಡಾ.ಪಿ. ಶ್ರೀಕೃಷ್ಣಭಟ್.<br>(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು)<br>**ಆಶಯಗಳು**<br>• ಕನ್ನಡ ಪ್ರಾಚೀನ ಭಾರತೀಯ ಭಾಷೆಗಳಲ್ಲಿ ಒಂದು ಎನ್ನುವ ತಿಳುವಳಿಕೆ ಅರಿವು<br>• ಕನ್ನಡ ಭಾಷೆಯ ಅನನ್ಯತೆಯ ನೆಲೆಗಳ ಪರಿಚಯ<br>• ಕನ್ನಡ ವ್ಯಾಕರಣ ಪರಂಪರೆಯ ಉಗಮ ಮತ್ತು ಚಳುವಳಿಯ ಅರಿವು<br>• ಸಂಸ್ಕೃತ ಹಾಗೂ ಪ್ರಾಕೃತ ಭಾಷೆಗಳ ಪ್ರಭಾವವನ್ನು ತಿಳಿಸಿಕೊಡುವುದು<br>• ವ್ಯಾಕರಣದ ಬೆಳವಣಿಗೆಯು ಕನ್ನಡ ಭಾಷೆಯ ನಿಧಿಯ ನೆಲೆ ಎನ್ನುವುದನ್ನು ತಿಳಿಸಿ ಕೊಡುವುದು<br>**ಫಲಿತಗಳು** |

| | | | |
|---|---|---|---|
| | | | • ಕನ್ನಡ ಭಾಷಾ ಪರಂಪರೆಯನ್ನು ಕುರಿತು ಸಕಾರಣವಾದ ಹೆಮ್ಮೆ<br>• ಹಳಗನ್ನಡ ಭಾಷೆಯ ಸ್ವರೂಪದ ಅರಿವು ಹಬ್ಬುತ್ತದೆ.<br>• ಕನ್ನಡ ಕಾವ್ಯ ಪರಂಪರೆಯ ಶ್ರೀಮಂತತೆಯನ್ನು ಕುರಿತು ಹುಟ್ಟುತ್ತದೆ<br>• ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಕನ್ನಡವನ್ನು ವಿಷಯವಾಗಿ ಆರಿಸಿಕೊಳ್ಳುವವರಿಗೆ ಈ ಪತ್ರಿಕೆ ಉಪಯುಕ್ತ |
| | | KAN C10 | **ಕನ್ನಡ ಭಾಷಾ ವಿಜ್ಞಾನ** **(ಕ್ರೆಡಿಟ್ 04)**<br>**ಘಟಕ–1 ಭಾಷೆ: ಅರ್ಥ–ವ್ಯಾಖ್ಯೆಗಳು, ಸ್ವರೂಪ–ಪ್ರಯೋಜನ**<br>**ಘಟಕ–2 ಭಾಷಾ ವಿಜ್ಞಾನದ ಮೂಲತತ್ವಗಳು**<br>**ಘಟಕ–3 ಭಾಷಾ ಬಳಕೆ: ಆಡಳಿತ ಭಾಷೆ, ವ್ಯವಹಾರಿಕ ಭಾಷೆ**<br>**ಘಟಕ–4 ಭಾಷಾ ವಿಜ್ಞಾನದ ಸಮಕಾಲೀನ ಬೆಳವಣಿಗೆಗಳು**<br>**ಪರಾಮರ್ಶನ ಗ್ರಂಥಗಳು**<br>1. ಕನ್ನಡ ಭಾಷೆ ಮತ್ತು ವ್ಯಾಕರಣ ಒಂದು ವಿವೇಚನೆ : ಕೆ. ಕುಶಾಲಪ್ಪಗೌಡ<br>2. ಕನ್ನಡ ಭಾಷಾ ವ್ಯಾಸಂಗ– ಸವದತ್ತಿಮಠ<br>3. ಸಾಮಾನ್ಯ ಭಾಷಾ ವಿಜ್ಞಾನ– ಕೆ.ಕೆಂಪೇಗೌಡ<br>4. ಕನ್ನಡ ವ್ಯಾಕರಣ ಮತ್ತು ಭಾಷೆ – ವ್ಹಿ.ಜಿ.ಪೂಜಾರ<br>5. ಕನ್ನಡ ಕೈಪಿಡಿ ಸಂಪುಟಗಳು : ಕೆ.ವಿ.ಪುಟ್ಟಪ್ಪ (ಪ್ರ.ಸಂ.)<br>6. ಭಾಷಾವಿಜ್ಞಾನದ ಮೂಲ ತತ್ವಗಳು : ಎಂ.ಚಿದಾನಂದಮೂರ್ತಿ<br>7. ತೌಲನಿಕ ಭಾಷಾವಿಜ್ಞಾನ : ಕೆ.ಕೆಂಪೇಗೌಡ<br>8. ಕನ್ನಡ ಭಾಷೆಯ ಚರಿತ್ರೆ : ಪ್ರ.ಗೋ.ಕುಲಕರ್ಣಿ<br>9. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ : ಡಿ.ಎನ್.ಶಂಕರಭಟ್ಟ<br>10. ಕನ್ನಡ ಭಾಷಾಶಾಸ್ತ್ರ : ರಾ.ಯ.ಧಾರವಾಡಕರ<br>11. ಕನ್ನಡ ಭಾಷಾಶಾಸ್ತ್ರ : ಹಂ.ಪ.ನಾಗರಾಜಯ್ಯ<br>12. ಭಾಷೆ ವಿಶ್ವಕೋಶ, ಕೆ.ವಿ.ನಾರಾಯಣ(ಸಂ)<br>(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು) |

| | | | |
|---|---|---|---|
| | | | **ಆಶಯಗಳು**<br>• ಮಾತೃಭಾಷೆಯ ಅನನ್ಯತೆಯನ್ನು ತಿಳಿಯುವುದರ ಮೂಲಕ ಅದನ್ನು ಕುರಿತ ಸಕಾರಾತ್ಮಕ ಭಾವನೆಯ ಹೆಚ್ಚಳ<br>• ಜಾಗತೀಕರಣದ ಹಿನ್ನೆಲೆಯಲ್ಲಿ ಪ್ರಾದೇಶಿಕ ಭಾಷೆಗಳ ಶಕ್ತಿ ಮತ್ತು ಸೊಗಸಿನ ಅರಿವು<br>• ಭಾಷೆಯ ವೈಜ್ಞಾನಿಕ ಅಧ್ಯಯನದ ಮಾದರಿಗಳ ಪರಿಚಯ<br>• ಭಾಷಾ ವಿಜ್ಞಾನದ ಪ್ರಾಯೋಗಿಕ ನೆಲೆಗಳು<br>**ಫಲಿತಗಳು**<br>• ಭಾಷೆಯ ವೈಜ್ಞಾನಿಕ ತಿಳುವಳಿಕೆ<br>• ಭಾಷೆಯ ಪಲ್ಲಟಗಳ ಅರಿವು<br>• ಭಾಷೆಯ ಪರಿಣಾಮಕಾರಿ ಹಾಗೂ ಸೃಜನಶೀಲ ಬಳಕೆಗೆ ಉಪಯುಕ್ತ |
| | | KAN C11 | **ಕನ್ನಡ ಛಂದಸ್ಸು** **(ಕ್ರೆಡಿಟ್ 04)**<br>**ಘಟಕ–1 ಕನ್ನಡ ಛಂದಸ್ಸು –ಅಧ್ಯಯನ ಪ್ರಯೋಜನ, ಬೆಳೆದು ಬಂದ ದಾರಿ**<br>**ಘಟಕ–2 ಗಣಗಳ ಸ್ವರೂಪ, ಖ್ಯಾತ ಕರ್ನಾಟಕಗಳು**<br>**ಘಟಕ–3 ರಗಳೆ, ಕಂದ, ಷಟ್ಪದಿ, ಸಾಂಗತ್ಯ, ತ್ರಿಪದಿ, ಅಕ್ಕರ, ಪಿರಿಯಕ್ಕರ**<br>**ಘಟಕ–4 ಆಧುನಿಕ ಕನ್ನಡ ಛಂದಸ್ಸು , ಹೊಸ ಪ್ರಯೋಗಗಳು**<br>**ಪರಾಮರ್ಶನ ಗ್ರಂಥಗಳು** |

| | | | |
|---|---|---|---|
| | | | 1. ಕನ್ನಡ ಛಂದಸ್ವರೂಪ : ಟಿ.ವಿ.ವೆಂಕಟಾಚಲಶಾಸ್ತ್ರಿ<br>2. ಕನ್ನಡ ಛಂದೋವಿಕಾಸ : ಡಿ.ಎಸ್.ಕರ್ಕಿ<br>3. ಛಂದೋಮಿತ್ರ : ಅ.ರಾ.ಮಿತ್ರ<br>4. ಕನ್ನಡ ಕೈಪಿಡಿ 1–2, ಮೈಸೂರು ವಿಶ್ವವಿದ್ಯಾನಿಲಯ<br>5. ಇಂಗ್ಲೀಷ್ ಗೀತೆಗಳು : ಬಿ.ಎಂ.ಶ್ರೀಕಂಠಯ್ಯ<br>6. ಸಮಾಲೋಕನ : ತೀ.ನಂ.ಶ್ರೀ<br>7. ಛಂದೋನಿಜಗುಣಿ : (ಸಂ)ಮಧುವನ ಶಂಕರ, ಮೊರಬದ ಮಲ್ಲಿಕಾರ್ಜುನ<br>(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು)<br><br>**ಆಶಯಗಳು**<br>• ಕಾವ್ಯ ಮತ್ತು ಭಾಷೆಯ ಅವಿನಾ ಸಂಬಂಧದ ಅರಿವು<br>• ಕನ್ನಡ ಛಂದೋ ಪ್ರಕರಣಗಳ ವೈಜ್ಞಾನಿಕ ಅಧ್ಯಯನ<br>• ಪಾರಂಪರಿಕ ಹಾಗೂ ಆಧುನಿಕ ಛಂದೋ ರೂಪಗಳ ಪರಿಚಯ<br>**ಫಲಿತಗಳು**<br>• ಜನಪದ ಮತ್ತು ಶಿಷ್ಟ ಛಂದೋಪ್ರಕರಣಗಳು ಕನ್ನಡ ಕಾವ್ಯ ಪರಂಪರೆಯನ್ನು ಸಮೃದ್ಧಿಗೊಳಿಸಿದ ಆರಿವು<br>• ಛಂದೋ ಲಯಗಳು ಹಾಗೂ ಸಾಮಾಜಿಕ ಸಂರಚನೆಗಳ ಅಂತಃಸಂಬಂಧದ ಅರಿವು<br>• ಆಧುನಿಕ ಜಾಗತಿಕ ಕಾವ್ಯ ಪರಂಪರೆ ಹಾಗೂ ದೇಸಿ ಕನ್ನಡ ಛಂದೋ ಲಯಗಳ ಪಲ್ಲಟ |
| | | KAN C12 | **ಪ್ರಾಚೀನ ಕನ್ನಡ ಸಾಹಿತ್ಯ** **(ಕ್ರೆಡಿಟ್ 04)**<br><br>**ಘಟಕ–1 ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪ್ರಭುತ್ವ**<br>**ಘಟಕ–2 ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೆಣ್ಣಿನ ನಿರೂಪಣೆ**<br>**ಘಟಕ–3 ಪ್ರಾಚೀನ ಕನ್ನಡ ಸಾಹಿತ್ಯ: ಮಾನವೀಯ ಮೌಲ್ಯ**<br>**ಘಟಕ–4 ವಡ್ಡಾರಾಧನೆ : ಕಾರ್ತಿಕ ರಿಷಿಯ ಕತೆ** |

**ಪರಾಮರ್ಶನ ಗ್ರಂಥಗಳು**

1. ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ.ಮುಗಳಿ
2. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು: ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು
3. ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು: ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟಗಳು: ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು
5. ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು : ರಂ.ಶ್ರೀ.ಮುಗಳಿ
6. ಸಾಹಿತ್ಯ ಸಂಗಾತಿ : ಕೀರ್ತಿನಾಥ ಕುರ್ತಕೋಟಿ
7. ಕನ್ನಡ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ : ಸಿ.ವೀರಣ್ಣ

(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು)

**ಆಶಯಗಳು**

- ಪ್ರಾಚೀನ ಕನ್ನಡ ಕಾವ್ಯ ಪರಂಪರೆ–ಧರ್ಮ ಮತ್ತು ಪ್ರಭುತ್ವದೊಂದಿಗಿನ ಸಂಬಂಧಗಳು
- ಪ್ರಾಚೀನ ಕನ್ನಡ ಕಾವ್ಯ ಪರಂಪರೆ ಎತ್ತಿರುವ ಸಾಮಾಜಿಕ ನ್ಯಾಯದ ಪ್ರಶ್ನೆಗಳು(ವರ್ಗ, ಜಾತಿ ಹಾಗೂ ಲಿಂಗ)
- ಪ್ರಾಚೀನ ಕನ್ನಡ ಸಾಹಿತ್ಯ–ಯುದ್ಧ, ಶಾಂತಿ ಹಾಗೂ ಸಹಭಾಳ್ವೆಯ ಪರಿಕಲ್ಪನೆಗಳು
- ಪ್ರಾಚೀನ ಕನ್ನಡ ಸಾಹಿತ್ಯದ ಸಾರ್ವತ್ರಿಕ ನೆಲೆಗಳ ಗ್ರಹಿಕೆ

**ಫಲಿತಗಳು**

- ಕನ್ನಡ ಕಾವ್ಯ ಪರಂಪರೆಯ ಮೊದಲ ಘಟ್ಟದ ಆಶಯಗಳ ಅರಿವು
- ಪ್ರಾಚೀನ ಕನ್ನಡ ಕವಿಗಳ ಆಧುನಿಕ ಪ್ರಶ್ನೆಗಳ ಅರಿವು
- ಕನ್ನಡ ಭಾಷೆಯ ಸೌಂದರ್ಯದ ಅಸ್ಥಿರತೆ
- ಪ್ರಾಚೀನ ಕನ್ನಡ ಸಾಹಿತ್ಯ ಸಮಕಾಲೀನತೆಯ ಅರಿವು

| | | | |
|---|---|---|---|
| | DSE | KAN E1 | **(ವಿದ್ಯಾರ್ಥಿಗಳು ಈ ಕೆಳಕಂಡ ನಾಲ್ಕು ಪತ್ರಿಕೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳಬೇಕು)**<br>A. **ಕನ್ನಡ ಪ್ರವಾಸ ಸಾಹಿತ್ಯ (ಕ್ರೆಡಿಟ್ 03)**<br>**ಘಟಕ–1** ಪ್ರವಾಸ ಸಾಹಿತ್ಯದ ಪರಂಪರೆ<br>**ಘಟಕ–2** ಪಠ್ಯ: ಸ್ವದೇಶಿ ಪ್ರವಾಸ ಕಥನ (ಯಾವುದಾದರೂ ಒಂದು ಪ್ರವಾಸಿ ಕಥನ/ ಆಯ್ದ ಭಾಗವನ್ನು ಬೋಧಿಸುವುದು)<br>**ಘಟಕ–3** ಪಠ್ಯ: ವಿದೇಶಿ ಪ್ರವಾಸ ಕಥನ (ಯಾವುದಾದರೂ ಒಂದು ಪ್ರವಾಸಿ ಕಥನ/ ಆಯ್ದ ಭಾಗವನ್ನು ಬೋಧಿಸುವುದು)<br>**ಪರಾಮರ್ಶನ ಗ್ರಂಥಗಳು**<br>1. ಕನ್ನಡದಲ್ಲಿ ಪ್ರವಾಸ ಸಾಹಿತ್ಯ : ಎಸ್.ವಿದ್ಯಾಶಂಕರ್<br>2. ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು : ಎಚ್.ಎಲ್.ನಾಗೇಗೌಡ<br>3. ಗಿರಿಜನ ಪ್ರಪಂಚ: ಎರಿಯರ್ ಎಲ್ವಿನ್<br>4. ಪಂಪಾಯಾತ್ರೆ: ವಿ.ಸೀತಾರಾಮಯ್ಯ<br>5. ಅಲೆಮಾರಿ ಅಂಡಮಾನ್ : ಕೆ.ಪಿ.ಪೂರ್ಣಚಂದ್ರ ತೇಜಸ್ವಿ<br>6. ಕಂಡಷ್ಟೇ ಚೀನಾ : ಎಸ್.ಪಿ.ಪದ್ಮಪ್ರಸಾದ್<br>7. ಮ್ಯಾನ್ಮಾರ್ ಪ್ರವಾಸ ಕಥನ – ಬುದ್ಧ ಭಕ್ತರ ನಾಡಿನಲ್ಲಿ: ಎಸ್.ಪಿ.ಪದ್ಮಪ್ರಸಾದ್<br>8. ಆಂಗ್ಲರ ನಾಡಿನಲ್ಲಿ ಅಲೆಮಾರಿ : ಎಸ್.ಪಿ.ಪದ್ಮಪ್ರಸಾದ್<br>(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು)<br>**ಆಶಯಗಳು**<br>• ಜಾಗತಿಕ ಆಸಕ್ತಿಯ ಕ್ಷೇತ್ರವಾಗಿ/ಸಂಗತಿಯಾಗಿ ಪ್ರವಾಸ ಸಾಹಿತ್ಯ<br>• ಪ್ರವಾಸ ಸಾಹಿತ್ಯ ಪರಂಪರೆಯ ಅರಿವು<br>• ಮಾಹಿತಿ ಜ್ಞಾನದ ಕ್ಷೇತ್ರವಾಗಿ ಪ್ರವಾಸ ಸಾಹಿತ್ಯ<br>• ಸಾಂಸ್ಕೃತಿಕ, ಭೌಗೋಳಿಕ ವೈವಿಧ್ಯತೆಯ ಅರಿವು<br>**ಫಲಿತಗಳು** |

- ಸಾಂಸ್ಕೃತಿಕ ಅನೇಕತೆಯ ಹಾಗೂ ಅದರ ಶ್ರೀಮಂತಿಕೆಯ ಅರಿವು
- ಪ್ರವಾಸೋದ್ಯಮವನ್ನು ಔದ್ಯೋಗಿಕವಾಗಿ ಬಳಸಿಕೊಳ್ಳುವುದರ ಸಾಧ್ಯತೆಗಳ ಅರಿವು
- ಸಾಂಸ್ಕೃತಿಕ ಸ್ಮಾರಕಗಳು, ಐತಿಹಾಸಿಕ ಸ್ಥಳಗಳನ್ನು ಬರವಣಿಗೆಯ ಮೂಲಕ ಜಾಗತಿಕವಾಗಿ ಪರಿಚಯಿಸುವ ಅಗತ್ಯದ ಮನವರಿಕೆ
- ಶೈಕ್ಷಣಿಕವಾಗಿ ಸಾಂಸ್ಕೃತಿಕ ವಿನಿಮಯ ಯೋಜನೆಯನ್ನು ಅಳವಡಿಸಿಕೊಳ್ಳುವ ಅರಿವು

**ಅಥವಾ**

B. **ಕನ್ನಡ ರಂಗಭೂಮಿ ಪರಂಪರೆ** **(ಕ್ರೆಡಿಟ್ 03)**

**ಘಟಕ – 1** ವೃತ್ತಿ ರಂಗಭೂಮಿ

**ಘಟಕ – 2** ಹವ್ಯಾಸಿ ರಂಗಭೂಮಿ

**ಘಟಕ – 3** ಆಧುನಿಕ ರಂಗಭೂಮಿ

( ಕುವೆಂಪು, ಬೇಂದ್ರೆ, ಪರ್ವತವಾಣಿ, ಶ್ರೀರಂಗ, ಲಂಕೇಶ್, ಚಂಪಾ, ಟಿ.ಪಿ.ಕೈಲಾಸಂ, ಚಂದ್ರಶೇಖರ ಕಂಬಾರ, ವೈದೇಹಿ, ದು.ಸರಸ್ವತಿ, ಚಂದ್ರಕಾಂತ ಕುಸನೂರ, ಮುಂತಾದವರ ಯಾವುದಾದರೂ ಒಬ್ಬರ ಒಂದು ನಾಟಕ ಪಠ್ಯ ಬೋಧನೆ ಮತ್ತು ನಾಟಕದ ವಿಡಿಯೊ ಪ್ರದರ್ಶನ)

**ಪರಾಮರ್ಶನ ಗ್ರಂಥಗಳು:**

1. ಆಧುನಿಕ ಕನ್ನಡ ರಂಗಭೂಮಿ –ಡಾ.ಕೆ.ಎಂ.ಮರುಳಸಿದ್ಧಪ್ಪ
2. ಶ್ರೀರಂಗ ಸಾರಸ್ವತ ಸಂಪುಟಗಳು –ಸಂ– ಜಿ.ಎಸ್. ಆಮೂರ
3. ಕನ್ನಡ ರಂಗಭೂಮಿ ನಡೆದು ಬಂದ ದಾರಿ : ಇನ್ನಷ್ಟು ಸೇರಿಸಬೇಕು

**ಆಶಯಗಳು**

- ಕನ್ನಡ ಸಮೃದ್ಧಿ ರಂಗಭೂಮಿ ಪರಂಪರೆಯ ಅರಿವು
- ರಂಗಭೂಮಿಯ ವಿವಿಧ ಮಾದರಿಗಳ(ವೃತ್ತಿ, ಹವ್ಯಾಸಿ, ಜಾನಪದ) ಪರಿಚಯ
- ರಂಗಭೂಮಿಯನ್ನು ವೃತ್ತಿಯಾಗಿ ಸ್ವೀಕರಿಸುವ ಸಾಧ್ಯತೆಯ ಪರಿಚಯ
- ರಂಗಭೂಮಿಯನ್ನು ಕನ್ನಡ ಕಲಾಪರಂಪರೆಯ ಭಾಗವಾಗಿ ನೋಡುವಿಕೆ

**ಫಲಿತಗಳು**

- ಸಮಕಾಲೀನ ಜಗತ್ತಿನ ಸವಾಲುಗಳ ಅರಿವು
- ರಂಗಭೂಮಿಯನ್ನು ವೃತ್ತಿಯಾಗಿ ಸ್ವೀಕರಿಸುವ ಆಸಕ್ತಿಯನ್ನು ಉತ್ತೇಜಿಸುವುದು
- ಕುಂದುತ್ತಿರುವ ರಂಗಭೂಮಿಯನ್ನು ಕುರಿತ ಆಸಕ್ತಿಯನ್ನು ಹೆಚ್ಚಿಸುವುದು
- ರಂಗಭೂಮಿಯನ್ನು ಶೈಕ್ಷಣಿಕ ಚಟುವಟಿಕೆಯಾಗಿ ಬಳಸಿಕೊಳ್ಳುವ ಸಾಧ್ಯತೆಯ ಶೋಧ

**ಅಥವಾ**

C. **ಕನ್ನಡ ಸಿನಿಮಾ** **(ಕ್ರೆಡಿಟ್ 03)**

**ಘಟಕ – 1** ಕನ್ನಡ ಚಲನಚಿತ್ರ ಪರಂಪರೆ

**ಘಟಕ – 2** ಮೂಕಿ ಸಿನಿಮಾ

ಯಾವುದಾದರೂ ಒಂದು ಮೂಕಿ ಸಿನಿಮಾದ ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನ, ನಟನೆ ಕುರಿತಂತೆ ವಿಶ್ಲೇಷಣೆ ಮತ್ತು ಚಿತ್ರ ಪ್ರದರ್ಶನ

**ಘಟಕ – 3** ಪ್ರಯೋಗಾತ್ಮಕ ಚಲನಚಿತ್ರ

ಒಂದು ಮುತ್ತಿನ ಕಥೆ, ಬರ, ಕಾಡು, ಪಲ್ಲವಿ, ಸಂಸ್ಕಾರ, ಘಟಶ್ರಾದ್ಧ, ಮಿಂಚಿನ ಓಟ, ವಂಶವೃಕ್ಷ, ತಬರನ ಕಥೆ, ದ್ವೀಪ, ಕಾಕನಕೋಟೆ, ಸಂಗೀತ, ಉಲ್ಪ ಪಲ್ಪ, ನಾನು ಅವನಲ್ಲ ಅವಳು, ಕನಸೆಂಬ ಕುದುರೆಯನೇರಿ, ಮಠ, ತಿಥಿ ಈ ರೀತಿಯ ಯಾವುದಾದರೂ ಒಂದು ಸಿನಿಮಾದ ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನ, ನಟನೆ ಕುರಿತಂತೆ ವಿಶ್ಲೇಷಣೆ ಮತ್ತು ಚಿತ್ರ ಪ್ರದರ್ಶನ

**ಪರಾಮರ್ಶನ ಗ್ರಂಥಗಳು:**

1.

**ಅಥವಾ**

**ಆಶಯಗಳು**

- ಜನಪ್ರಿಯ ಮನೋರಂಜನಾ ಮಾಧ್ಯಮವನ್ನು ಶೈಕ್ಷಣಿಕ ಶಿಸ್ತಾಗಿ ಅಧ್ಯಯನ ಮಾಡುವುದು

- ಸೃಜನಶೀಲ ಕೃತಿಗಳ ಸಿನಿಮಾ ರೂಪಾಂತರಗಳ ಅಧ್ಯಯನ
- ಸಿನಿಮಾವನ್ನು ಮುಖ್ಯ ಕಲಾಪ್ರಕಾರವಾಗಿ ಅಧ್ಯಯನ ಮಾಡುವುದು
- ನಟನೆಯನ್ನು ವೃತ್ತಿಯಾಗಿ ತೆಗೆದುಕೊಳ್ಳಬೇಕಾದ ಸಾಧ್ಯತೆಗಳು

**ಫಲಿತಗಳು**

- ನಟನೆಯನ್ನು ವೃತ್ತಿಯಾಗಿ ಬೆಳೆಸಿಕೊಳ್ಳುವುದು
- ಸಿನಿಮಾದ ವಿವಿಧ ಹಂತಗಳನ್ನು ವೃತ್ತಿಯಾಗಿ ಪರಿಗಣಿಸುವ(ಚಿತ್ರಕಥೆ, ಸಂಭಾಷಣೆ, ಹಿನ್ನೆಲೆ ಸಂಗೀತ, ಸಂಕಲನ ಇತ್ಯಾದಿ)
- ಅಭಿರುಚಿ ನಿರ್ಮಾಣ
- ಸಿನಿಮಾ ವಿಮರ್ಶೆಯನ್ನು ಒಳಗೊಂಡಂತೆ ಸಿನಿಮಾ ಕ್ಷೇತ್ರವನ್ನು ಸಂಶೋಧನಾ ಕ್ಷೇತ್ರವಾಗಿಸಿಕೊಳ್ಳುವ ಸಾಧ್ಯತೆಗಳು

D. **ಪರಿಸರ ಸಾಹಿತ್ಯ** **(ಕ್ರೆಡಿಟ್ 03)**

**ಘಟಕ – 1** ಕನ್ನಡ ಕವಿಗಳ ಪರಿಸರ ಪ್ರಜ್ಞೆ

**ಘಟಕ – 2** ಕರ್ನಾಟಕ ಪರಿಸರ ಚಳುವಳಿಗಳು

ಅಪ್ಪಿಕೋ ಚಳುವಳಿ, ಪಶ್ಚಿಮಘಟ್ಟ ಉಳಿಸಿ ಹೋರಾಟ, ಮಹಾದಾಯಿ ಚಳುವಳಿ ಇಂತಹ ಚಳುವಳಿಗಳ ಆಶಯ ಮತ್ತು ಪರಿಣಾಮ

**ಘಟಕ – 3** ಅಭಿವೃದ್ಧಿ ಮತ್ತು ಪರಿಸರ

**ಪರಾಮರ್ಶನ ಗ್ರಂಥಗಳು:**

1. ಪರಿಸರ ಚಳುವಳಿಗಳು– ಕೆ.ಮೋಹನಕೃಷ್ಣ ರೈ
2. ಪ್ರಕೃತಿ ಮತ್ತು ಪರಿಸರ– ಪೂರ್ಣಚಂದ್ರ ತೇಜಸ್ವಿ, ಚಕ್ರವರ್ತಿ
3. ಪರಿಸರದ ಕಥೆ– ಪೂರ್ಣಚಂದ್ರ ತೇಜಸ್ವಿ

**ಆಶಯಗಳು**

- ಜಾಗತಿಕ ಪರಿಸರ ಸನ್ನಿವೇಶಗಳ ಸ್ಥೂಲ ಪರಿಚಯ

| | | | |
|---|---|---|---|
| | | • ಅಭಿವೃದ್ಧಿ ಮತ್ತು ಪರಿಸರದ ಒಳಸಂಬಂಧಗಳ ಅರಿವು<br>• ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪರಿಸರ ಚಿತ್ರಣ<br>**ಫಲಿತಗಳು**<br>• ಪರಿಸರ ಸಂರಕ್ಷಣೆ ಯೋಜನೆಗಳ ಕುರಿತ ಅರಿವು<br>• ಪರಿಸರ ಸಂರಕ್ಷಣಾ ಯೋಜನೆಗಳಲ್ಲಿ ವೃತ್ತಿ ಸಾಧ್ಯತೆಗಳು<br>• ಪರಿಸರ ಕಾಳಜಿಯ ನೈತಿಕ ಹೊಣೆಗಾರಿಕೆ ಎನ್ನುವ ಅರಿವು ಮಾಡುವುದು |
| | Vocational | KAN V1 | A. **ಕಂಪ್ಯೂಟರ್ ಕನ್ನಡ** **(ಕ್ರೆಡಿಟ್ 03)**<br>**ಘಟಕ–1** ಮಾಹಿತಿ ತಂತ್ರಜ್ಞಾನ ಮತ್ತು ಕನ್ನಡ ಪ್ರಸಾರ<br>**ಘಟಕ–2** ಗಣಕಗಳಲ್ಲಿ ಕನ್ನಡದ ಅಳವಡಿಕೆ, ತಂತ್ರಾಂಶ ಮತ್ತು ಬಳಕೆ<br>**ಘಟಕ–3** ಇ–ಮೇಲ್, ಬ್ಲಾಗ್, ಕೋಶಗಳು ಮತ್ತು ಕನ್ನಡ ಮಾಹಿತಿ ಜಾಲತಾಣಗಳು (ಪ್ರಾಯೋಗಿಕತೆಗೆ ಒತ್ತು ಕೊಡುವುದು)<br>**ಆಶಯಗಳು**<br>• ವಿದ್ಯಾರ್ಥಿಗಳನ್ನು ಸಮಕಾಲೀನ ಸ್ಪರ್ಧಾತ್ಮಕ ಜಗತ್ತಿಗೆ ಸಜ್ಜುಗೊಳಿಸುವುದು<br>• ಕಂಪ್ಯೂಟರ್ ಮೂಲಕ ಕನ್ನಡ ಭಾಷೆಯ/ಬಳಕೆಯ ಸಾಧ್ಯತೆಗಳ ವಿಸ್ತಾರ<br>• ಭಾಷಾ ಪ್ರಯೋಗಾಲಯದ ಮೂಲಕ ಕನ್ನಡ ಕಲಿಕೆಯ ಸಾಧ್ಯತೆಯ ವಿಸ್ತಾರ<br>**ಫಲಿತಗಳು**<br>• ಔದ್ಯೋಗಿಕ ಆಚರಣೆಗಳು<br>• ಇ–ಪುಸ್ತಕ ಇತ್ಯಾದಿಗಳ ಮೂಲಕ ಓದಿನ ಆಸಕ್ತಿಯನ್ನು ಹೆಚ್ಚಿಸುವುದು |

• ಭಾಷಾ ಪ್ರಯೋಗಾಲಯದ ಮೂಲಕ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಕನ್ನಡ ಕಲಿಸುವ ಸುವರ್ಣಾವಕಾಶ

**ಅಥವಾ**

B. **ಜಾಹಿರಾತು ಕನ್ನಡ** **(ಕ್ರೆಡಿಟ್ 03)**

**ಘಟಕ – 1** ಜಾಹಿರಾತು ಮಹತ್ವ – ಅಗತ್ಯತೆ

**ಘಟಕ – 2** ಜಾಹಿರಾತು ಭಾಷಾ ಸ್ವರೂಪ

**ಘಟಕ – 3** ಜಾಹಿರಾತು ಮತ್ತು ಮಹಿಳೆ

**ಪರಾಮರ್ಶನ ಗ್ರಂಥಗಳು:**

**ಆಶಯಗಳು**

- ಸಾರ್ವಜನಿಕ ಜೀವನದಲ್ಲಿ ಜಾಹೀರಾತುಗಳ ಪಾತ್ರ ಕುರಿತ ತಿಳುವಳಿಕೆ
- ಪ್ರಭಾವಶಾಲಿ ವಾಣಿಜ್ಯೋದ್ಯಮವಾಗಿ ಜಾಹೀರಾತು ಜಗತ್ತು
- ಜನಪ್ರಿಯ ಹಾಗೂ ಲಾಭದಾಯಕ ವೃತ್ತಿಯಾಗಿ ಜಾಹಿರಾತು ಪ್ರಪಂಚ
- ಜಾಹೀರಾತಿನ ಭಿನ್ನ ಮಾದರಿಗಳ ಪರಿಚಯ

**ಫಲಿತಗಳು**

- ಆಕರ್ಷಕ ವ್ಯಕ್ತಿತಯಾಗಿರುವ ಜಾಹೀರಾತು ಉದ್ಯಮದ ಮಿಥ್ಯ ಮತ್ತು ಸತ್ಯಗಳ ಪರಿಚಯ
- ಜಾಹೀರಾತು ಕನ್ನಡ ಭಾಷೆಯ ಸ್ವರೂಪದ ಪರಿಚಯ
- ಜಾಹೀರಾತುಗಳ ಸಾಮಾಜಿಕ, ಸಾಂಸ್ಕೃತಿಕ ಪ್ರಭಾವದ ಅರಿವು

**ಅಥವಾ**

| | | | |
|---|---|---|---|
| | | | B. **ಕಿರುಚಿತ್ರ ಸಾಹಿತ್ಯ** **(ಕ್ರೆಡಿಟ್ 03)**<br>**ಘಟಕ – 1** ಕಿರುಚಿತ್ರ ಮಹತ್ವ – ಅಗತ್ಯತೆ<br>**ಘಟಕ – 2** ಕಿರುಚಿತ್ರ ತಯಾರಿಕೆಯ ವಿವಿಧ ಹಂತಗಳು<br>ಸಾಹಿತ್ಯ, ಸಂಭಾಷಣೆ, ಛಾಯಾಗ್ರಹಣ, ಸಂಕಲನ ಇತರೆ<br>**ಘಟಕ – 3** ಸ್ಥಳೀಯ ಸಾಹಿತಿ/ಕಲಾವಿದ/ಸಾಧಕರು ಒಬ್ಬರನ್ನು ಕುರಿತು ಕಿರುಚಿತ್ರ/ಸಾಕ್ಷಚಿತ್ರ ತಯಾರಿಕೆ (ಪ್ರಾಯೋಗಿಕ)<br><br>**ಆಶಯಗಳು**<br>• ಕನ್ನಡ ಕಿರುಚಿತ್ರ ಪರಂಪರೆಯ ಪರಿಚಯ<br>• ಕಿರುಚಿತ್ರ ಮತ್ತು ಸಾಹಿತ್ಯದ ಸಂಬಂಧಗಳ ಅಧ್ಯಯನ<br>• ಸರ್ಕಾರಿ ಯೋಜನೆಗಳು ಮತ್ತು ಕಿರು ಚಿತ್ರಗಳು<br>• ಕನ್ನಡದ ಮುಖ್ಯ ಕಿರುಚಿತ್ರಗಳು<br>• ವಿದ್ಯಾರ್ಥಿಗಳೇ ಕಿರುಚಿತ್ರಗಳನ್ನು ತಯಾರಿಸುವ ಅವಕಾಶ<br><br>**ಫಲಿತಗಳು**<br>• ಅರಿವಿನ ಪಯಾಣದ ಭಾಗವಾಗಿ ಕಿರುಚಿತ್ರಗಳು<br>• ಆಧುನಿಕ ಭಾರತದ ಅಭಿವೃದ್ಧಿ ಪರಿಕಲ್ಪನೆಯ ರಾಯಭಾರಿಯಾಗಿ ಕಿರುಚಿತ್ರಗಳು<br>• ವಿದ್ಯಾರ್ಥಿ ಜೀವನದಲ್ಲಿ ಕಿರುಚಿತ್ರ ನಿರ್ಮಾಣದ ಅವಕಾಶ ಮತ್ತು ಸಾಧ್ಯತೆ/ಶೈಕ್ಷಣಿಕ ಶಿಸ್ತಾಗಿ ಕಿರುಚಿತ್ರ ತಯಾರಿಕೆಯನ್ನು ಅಳವಡಿಸಿಕೊಳ್ಳುವುದು<br><br>**ಅಥವಾ**<br><br>D. **ಕಚೇರಿ ಕನ್ನಡ** **(ಕ್ರೆಡಿಟ್ 03)**<br>**ಘಟಕ – 1** ವ್ಯಾವಹಾರಿಕ ಕನ್ನಡದ ಮಹತ್ವ – ಅಗತ್ಯತೆ |

| | | | |
|---|---|---|---|
| | | | **ಘಟಕ – 2** ಕಚೇರಿ ಶಬ್ದಗಳು/ಪರಿಭಾಷೆಗಳು<br>**ಘಟಕ – 3** ಕಚೇರಿ ಕನ್ನಡ (ಪ್ರಾಯೋಗಿಕ) ವಿವಿಧ ರೀತಿಯ ಪತ್ರ ರಚನೆ, ಟಿಪ್ಪಣಿ ರಚನೆ, ಕಡತ ನಿರ್ವಹಣೆ, (ಫೋಲ್ಡರ್, ಫೈಲ್, ವರ್ಡ್, ಎಕ್ಸೆಲ್ ಶೀಟ್, ಪ್ರೆಸೆಂಟೇಷನ್, ಪೇಜ್‌ಮೇಕರ್, ಫೋಟೋಶಾಪ್ ಪರಿಚಯ – ಪ್ರಯೋಗ)<br>**ಪರಾಮರ್ಶನ ಗ್ರಂಥಗಳು:**<br>1. ಆಡಳಿತ ಕನ್ನಡ, ಪ್ರ.ಸಂ: ಮುಖ್ಯಮಂತ್ರಿ ಚಂದ್ರು, ಎ. ಮುರಿಗೆಪ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.<br>2. ಆಡಳಿತ ಪದಕೋಶ, ಸಂ: ಅಬ್ದುಲ್ ರೆಹಮಾನ್ ಪಾಷ, ಎಸ್.ನಾಗವೇಣಿ<br>3. ವ್ಯಾವಹಾರಿಕ ಕನ್ನಡ : ಎಚ್ಚೆಸ್ಕೆ<br>4. ವ್ಯಾವಹಾರಿಕ ಕನ್ನಡ : ಡಿ.ಟಿ.ರಂಗಸ್ವಾಮಿ<br>5. ಆಡಳಿತ ಭಾಷೆ ಕನ್ನಡ : ಟಿ.ಎಸ್.ಛಾಯಾಪತಿ<br>6. ಸಂಕ್ಷಿಪ್ತ ಆಡಲಿತ ಪದಕೋಶ ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ<br>7. ಕಛೇರಿ ಕೈಪಿಡಿ : ಸರ್ಕಾರಿ ನೌಕರರ ಪುಸ್ತಕ ಪ್ರಕಾಶನ<br>**ಆಶಯಗಳು**<br>• ಆಡಳಿತದಲ್ಲಿ ಕನ್ನಡ ಬಲಗೊಳಿಸುವುದು<br>• ವಿದ್ಯಾರ್ಥಿಗಳಿಗೆ ಕಚೇರಿ ಕನ್ನಡದ ಪಾರಿಭಾಷಿಕ ಪದಕೋಶದ ಪರಿಚಯ(ಪತ್ರರಚನೆ, ಟಿಪ್ಪಣಿ ಮಂಡನೆ, ಕಡತ ನಿರ್ವಹಣೆ, ಇತ್ಯಾದಿ)<br>• ಆಡಳಿತ ಕನ್ನಡದ ಸರಳೀಕರಣ<br>**ಫಲಿತಗಳು**<br>• ವಿವಿಧ ಉದ್ಯೋಗದಲ್ಲಿ ಕನ್ನಡದ ಸಮರ್ಪಕ ಬಳಕೆಯ ತಿಳುವಳಿಕೆ<br>• ಸಾರ್ವಜನಿಕ ಬದುಕಿನಲ್ಲಿ ಆಡಳಿತ ಕನ್ನಡದ ಅಳವಡಿಕೆಯ ಅಗತ್ಯ ಮತ್ತು ಮಹತ್ವವನ್ನು ಅರಿಯುವುದು<br>• ಇದರಲ್ಲಿ ಪರಿಣಿತಿಯನ್ನು ವಿದ್ಯಾರ್ಥಿಗಳು ಪಡೆಯುವುದು |
| VI | DSC | KAN C13 | **ಕನ್ನಡ ವ್ಯಾಕರಣ ಪರಂಪರೆ: ಶಬ್ದಮಣಿದರ್ಪಣ (ಸಮಾಸ, ಅಖ್ಯಾತ, ಧಾತು ಮತ್ತು ಅವ್ಯಯ) (ಕ್ರೆಡಿಟ್ 04)**<br>**ಘಟಕ–1** ಕನ್ನಡ ವ್ಯಾಕರಣ ಪರಂಪರೆ: ಆಧುನಿಕ ಚಿಂತನೆಗಳು<br>**ಘಟಕ–2** ಸಮಾಸ ಪ್ರಕರಣ |

| | | | |
|---|---|---|---|
| | | | **ಘಟಕ–3** ಆಖ್ಯಾತ ಪ್ರಕರಣ<br>**ಘಟಕ–4** ಧಾತು ಪ್ರಕರಣ<br>**ಪರಾಮರ್ಶನ ಗ್ರಂಥಗಳು**<br>1. ಕನ್ನಡ ಭಾಷೆ ಮತ್ತು ವ್ಯಾಕರಣ ಒಂದು ವಿವೇಚನೆ : ಕೆ. ಕುಶಾಲಪ್ಪಗೌಡ<br>2. ಕನ್ನಡ ವ್ಯಾಕರಣ ಮತ್ತು ಭಾಷೆ – ವ್ಹಿ.ಜಿ.ಪೂಜಾರ<br>3. ಕೇಶಿರಾಜನ ಶಬ್ದಮಣಿದರ್ಪಣ ವಿಳಾಸ– ವಿ. ಶಿವಾನಂದ<br>4. ಹಳಗನ್ನಡ ವ್ಯಾಕರಣ– ಟಿ.ವಿ.ವೆಂಕಟಾಚಲಾಶಾಸ್ತ್ರಿ<br>5. ಕನ್ನಡ ಕೈಪಿಡಿ ಸಂಪುಟಗಳು : ಕೆ.ವಿ.ಪುಟ್ಟಪ್ಪ (ಪ್ರ.ಸಂ.)<br>6. ಪ್ರಾಚೀನ ಕನ್ನಡ ವ್ಯಾಕರಣಗಳು : ಎಂ.ವಿ.ಸೀತಾರಾಮಯ್ಯ<br>7. ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ : ಡಿ.ಎನ್.ಶಂಕರಭಟ್ಟ<br>8. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ : ಡಿ.ಎನ್.ಶಂಕರಭಟ್ಟ<br>9. ಕನ್ನಡ ವ್ಯಾಕರಣ ಪರಂಪರೆಯ ಮೇಲೆ ಸಂಸ್ಕೃತದ ಪ್ರಭಾವ : ಪಿ.ಶ್ರೀಕೃಷ್ಣಭಟ್<br>(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು)<br>**ಆಶಯಗಳು**<br>• ಕನ್ನಡವು ಪ್ರಾಚೀನ ಭಾರತೀಯ ಭಾಷೆಗಳಲ್ಲಿ ಒಂದು ಎನ್ನುವ ತಿಳುವಳಿಕೆ ಮೂಡಿಸುವುದು.<br>• ಕನ್ನಡ ಭಾಷೆಯ ಅನನ್ಯತೆಯ ನೆಲೆಗಳ ಪರಿಚಯ<br>• ಕನ್ನಡ ವ್ಯಾಕರಣ ಪರಂಪರೆಯ ಉಗಮ ಮತ್ತು ಬೆಳವಣಿಗೆಯ ಅರಿವು<br>• ಸಂಸ್ಕೃತ ಹಾಗೂ ಪ್ರಾಕೃತ ಭಾಷೆಗಳ ಪ್ರಭಾವವನ್ನು ತಿಳಿಸಿಕೊಡುವುದು.<br>• ವ್ಯಾಕರಣದ ಬೆಳವಣಿಗೆಯು ಕನ್ನಡ ಭಾಷೆಯ ಸಿದ್ದಿಯ ನೆಲೆ ಎನ್ನುವುದನ್ನು ತಿಳಿಸಿಕೊಡುವುದು.<br>**ಫಲಿತಗಳು** |

| | | | |
|---|---|---|---|
| | | | • ಕನ್ನಡ ಭಾಷಾ ಪರಂಪರೆಯನ್ನು ಕುರಿತ ಸಕಾರಣವಾದ ಹೆಮ್ಮೆ.<br>• ಹಳಗನ್ನಡ ಭಾಷೆಯ ಸ್ವರೂಪದ ಅರಿವು ಹುಟ್ಟುತ್ತದೆ.<br>• ಕನ್ನಡ ಕಾವ್ಯ ಪರಂಪರೆಯ ಶ್ರೀಮಂತಿಕೆಯನ್ನು ಕುರಿತು ತಿಳುವಳಿಕೆ ಹುಟ್ಟುತ್ತದೆ.<br>• ಸಿವಿಲ್ ಸರ್ವಿಸ್ ಪರೀಕ್ಷೆಗಳಲ್ಲಿ ಕನ್ನಡವನ್ನು ವಿಷಯವಾಗಿ ಆರಿಸಿಕೊಳ್ಳುವವರಿಗೆ ಈ ಪತ್ರಿಕೆ ಉಪಯುಕ್ತ. |
| | | KAN C14 | **ಸಾಂಸ್ಕೃತಿಕ ಅಧ್ಯಯನಗಳು: ಪಠ್ಯಗಳ ಬಹುಶಿಸ್ತೀಯ ಅಧ್ಯಯನ** **(ಕ್ರೆಡಿಟ್ 04)**<br><br>**ಘಟಕ–1** ನೀಲಮ್ಮನ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ<br>**ಘಟಕ–2** ಶರೀಫರ ತತ್ವಪದಗಳು ಮತ್ತು ವಸಾಹತು ಪ್ರಜ್ಞೆ<br>**ಘಟಕ–3** ಕೊಡಗಿನ ಗೌರಮ್ಮ ಮತ್ತು ಗಾಂಧಿವಾದ<br>**ಘಟಕ–4** ತೇಜಸ್ವಿ ಕೃತಿಗಳಲ್ಲಿ ಪರಿಸರ ಪ್ರಜ್ಞೆ<br>**ಪರಾಮರ್ಶನ ಗ್ರಂಥಗಳು**<br>1. ಸಮಗ್ರ ವಚನ ಸಂಪುಟಗಳು: ಎಂ.ಎಂ.ಕಲಬುರ್ಗಿ(ಪ್ರ.ಸಂ.)<br>2. ಬರಕೊ ಪದ ಬರಕೊ: ಶಿವನಾಂದ ಗುಬ್ಬಣ್ಣನವರ<br>3. ಪರಿಸರ ಕತೆಗಳು: ಕೆ.ಪಿ.ಪೂರ್ಣಚಂದ್ರ ತೇಜಸ್ವಿ<br>4. ವಿಸ್ಮಯ 1–3: ಕೆ.ಪಿ.ಪೂರ್ಣಚಂದ್ರ ತೇಜಸ್ವಿ<br>(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು)<br><br>**ಆಶಯಗಳು**<br>• ಕನ್ನಡ ಸಾಹಿತ್ಯವು ನಿರಂತರವಾಗಿ ಸಮಾಜಶಾಸ್ತ್ರ, ಚರಿತ್ರೆ, ಜಾನಪದ, ಮಾನವಶಾಸ್ತ್ರ, ಮನಃಶಾಸ್ತ್ರ ಮೊದಲಾದ ಅನ್ಯಜ್ಞಾನ ಶಿಸ್ತುಗಳ ಒಡನಾಟ ಮತ್ತು ಕೊಡುಕೊಳೆಗಳ ಮೂಲಕ ಸಾಂಸ್ಕೃತಿಕ ಪಠ್ಯಗಳನ್ನು ರೂಪಿಸಿಕೊಳ್ಳುತ್ತಲೇ ಇದೆ.<br>• ಈ ಪತ್ರಿಕೆಯಲ್ಲಿ ಈ ಬಗೆಯ ಸಾಹಿತ್ಯ ಪಠ್ಯಗಳನ್ನು ವಿಭಿನ್ನ ನೆಲೆಗಳಲ್ಲಿ ತಿಳಿಸಿಕೊಡಬೇಕು.<br>• ಕನ್ನಡದಲ್ಲಿ ಸಾಂಸ್ಕೃತಿಕ ಅಧ್ಯಯನಗಳು ನಿರಂತರವಾಗಿ ನಡೆದುದೇ ಅಲ್ಲದೇ ಹೇಗೆ ಅದು ಕಾಲದಿಂದ ಕಾಲಕ್ಕೆ ಹೊಸ |

| | | | |
|---|---|---|---|
| | | | ಆಯಾಮಗಳೊಂದಿಗೆ ತಿರುವುಗಳನ್ನು ಪಡೆದಿದೆ ಎಂಬುದನ್ನು ತಿಳಿಸಿಕೊಡುವುದು.<br>• 12ನೇ ಶತಮಾನದ ಸಾಮಾಜಿಕ ಕ್ರಾಂತಿಯ ಹಿನ್ನೆಲೆಯಲ್ಲಿ ವಚನ ಸಾಹಿತ್ಯವನ್ನು ತಿಳಿಸಬೇಕು<br>• ವಸಾಹತುಶಾಹಿ ಕಾಲಘಟ್ಟದ ಪಲ್ಲಟಗಳೊಂದಿಗೆ ಶರೀಫರ ತತವಪದಗಳನ್ನು ತಿಳಿಸಿಕೊಡಬೇಕು<br>• ನವೋದಯದ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಮೇಲೆ ಗಾಂಧಿವಾದ ಬೀರಿದ ಪ್ರಭಾವಗಳ ಹಿನ್ನೆಲೆಯಲ್ಲಿ ಕೊಡಗಿನ ಗೌರಮ್ಮನ ಕಥೆಗಳನ್ನು ತಿಳಿಸಬೇಕು<br>• ನವ್ಯೋತ್ತರ ಆಶಯಗಳು ಮತ್ತು ಇಕಾಲಜಿಯ ಅರಿವಿನೊಂದಿಗೆ ತೇಜಸ್ವಿಯವರ ಕೃತಿಗಳ ಪರಿಚಯವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡಬೇಕು.<br><br>**ಫಲಿತಗಳು**<br>• ಈ ಪತ್ರಿಕೆಯು ವಿದ್ಯಾರ್ಥಿಗಳು 'ಸಂಸ್ಕೃತಿ' ಮತ್ತು 'ಸಾಂಸ್ಕೃತಿಕ' ಪರಿಕಲ್ಪನೆಯನ್ನು ಗ್ರಹಿಸಲು ಸಹಾಯ ಮಾಡುತ್ತದೆ<br>• ಸಾಂಸ್ಕೃತಿಕ ಎಂದರೆ ಸಾಹಿತ್ಯ, ಸಂಗೀತ, ಚಿತ್ರಕಲೆ ಮೊದಲಾದ ಲಲಿತ ಕಲೆಗಳಿಗಷ್ಟೇ ಸೀಮಿತವಾಗಿರದೆ, ಅದು ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಮುಂತಾದ ಹಲವು ಆಯಾಮಗಳನ್ನು ಹೇಗೆ ಒಳಗೊಳ್ಳುತ್ತದೆ ಎಂಬ ಬಹುಶಿಸ್ತೀಯ ಅಧ್ಯಯನಕ್ಕೆ ಪ್ರೇರೇಪಿಸುತ್ತದೆ.<br>• ಜನತೆಯ ಸಮಗ್ರ ಜೀವನ ವಿಧಾನವಾದ ಸಂಸ್ಕೃತಿಯನ್ನು ವಚನಕಾರರಿಂದ ಹಿಡಿದು ಆಧುನಿಕ ನವ್ಯೋತ್ತರ ಕಾಲಘಟ್ಟದವರೆಗಿನ ವಿಶಾಲ ಹರಹಿನಲ್ಲಿ ಅರ್ಥೈಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ.<br>• ಈ ನೆಲೆಯಲ್ಲಿ ಕೃತಿಗಳ ಓದು ವಿದ್ಯಾರ್ಥಿಗಳಲ್ಲಿ ವೈಚಾರಿಕ ಅರಿವನ್ನು ಬೆಳೆಸಲು ಸಹಕಾರಿಯಾಗಿದೆ.) |
| | | KAN C15 | **ಗ್ರಂಥ ಸಂಪಾದನೆ, ಹಸ್ತಪ್ರತಿ ಶಾಸ್ತ್ರ** **(ಕ್ರೆಡಿಟ್ 04)**<br>**ಘಟಕ–1** ಗ್ರಂಥಸಂಪಾದನೆಯ ಸ್ವರೂಪ–ಮಹತ್ವ<br>**ಘಟಕ–2** ಗ್ರಂಥಸಂಪಾದನೆಗೆ ವಿದ್ವಾಂಸರ ಕೊಡುಗೆ: ಕಿಟ್ಟೆಲ್, ಬಿ.ಎಲ್.ರೈಸ್, ಫ.ಗು. ಹಳಕಟ್ಟಿ, ಡಿ.ಎಲ್.ನರಸಿಂಹಚಾರ್ಯ<br>**ಘಟಕ–3** ಹಸ್ತಪ್ರತಿಗಳ ಅರ್ಥ–ಪ್ರಕಾರ–ಮಹತ್ವ<br>**ಘಟಕ–4** ಹಸ್ತಪ್ರತಿಗಳ ಲೇಖನ ಸಾಮಗ್ರಿ ಮತ್ತು ಲಿಪಿಕಾರರು |

**ಪರಾಮರ್ಶನ ಗ್ರಂಥಗಳು**

1. ಕನ್ನಡ ಗ್ರಂಥ ಸಂಪಾದನಾಶಾಸ್ತ್ರ : ಎಂ.ಎಂ.ಕಲಬುರ್ಗಿ
2. ಕನ್ನಡ ಗ್ರಂಥ ಸಂಪಾದನೆ : ಡಿ.ಎಲ್.ನರಸಿಂಹಾಚಾರ್
3. ಗ್ರಂಥ ಸಂಪಾದನಾಶಾಸ್ತ್ರ ಪರಿಚಯ :ಸೀತಾರಾಮ ಜಾಗೀರದಾರ್
4. ಮಣಿಹ : ಎಂ.ವಿ.ಸೀತಾರಾಮಯ್ಯ ಮತ್ತು ಆರ್. ಶೇಷಶಾಸ್ತ್ರಿ (ಸಂ)
5. ಹಸ್ತಪ್ರತಿಶಾಸ್ತ್ರ : ಎಂ.ಎಂ.ಕಲಬುರ್ಗಿ
6. ಹಸ್ತಪ್ರತಿ ಸಂರಕ್ಷಣೆಯ ವಿಧಾನಗಳು : ಬಿ.ಎಸ್.ಸಣ್ಣಯ್ಯ
7. ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ : ಬಿ.ಕೆ.ಹಿರೇಮಠ
8. ಕನ್ನಡ ಹಸ್ತಪ್ರತಿ ಲಿಪಿಕಾರರು, ಪ್ರಶಸ್ತಿಗಳು : ಬಿ.ಆರ್.ಹಿರೇಮಠ
9. ಭಾರತೀಯ ಗ್ರಂಥಸಂಪಾದನಾ ಪರಿಚಯ : ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ (ಅನು)

(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು)

ಆಶಯಗಳು

- ಈ ಪತ್ರಿಕೆಯಲ್ಲಿ ಗ್ರಂಥಸಂಪಾದನೆ ಮತ್ತು ಹಸ್ತಪ್ರತಿ ಶಾಸ್ತ್ರಗಳ ಅರ್ಥ, ಸ್ವರೂಪ ಮತ್ತು ಮಹತ್ವಗಳನ್ನು ತಿಳಿಸಿಕೊಡಬೇಕು.
- "Textual criticism" ಗೆ ಸಂಬಂಧಿಸಿದಂತೆ ಪೋಸ್ಟ್ ಗೇಟ್, ಕಾರ್ಲ್ ಲ್ಯಾರ್ಕನ್ ಮೊದಲಾದವರ ವ್ಯಾಖ್ಯಾನಗಳನ್ನು ಪರಿಚಯ ಮಾಡಿಕೊಡಬೇಕು.
- ಹಸ್ತಪ್ರತಿಗಳ ವಿಧಗಳು, ಸ್ವಾಲಿತ್ಯ, ಲಿಪಿಕಾರ, ಲೇಖನ ಸಾಮಗ್ರಿಗಳು, ಪಾಠಾಂತರಗಳು, ಪಾಠಪರಿಷ್ಕರಣೆ, ಶುದ್ಧಪ್ರತಿ , ಮೂಲಪ್ರತಿ ಮೊದಲಾದ ಪರಿಕಲ್ಪನೆಗಳನ್ನು ವಿಸ್ತೃತವಾಗಿ ಪರಿಚಯಿಸಬೇಕು.
- ಸಂಗ್ರಹ, ಪಾಠನಿರ್ಣಯ, ಶುದ್ಧಿಕರಣ ಮೊದಲಾದ ಗ್ರಂಥಸಂಪಾದನೆಯ ವಿವಿಧ ಹಂತಗಳ ಬಗೆಗೆ ತಿಳಿಸಿಕೊಡಬೇಕು.
- ಗ್ರಂಥಸಂಪಾದಕನಿಗೆ ಇರಬೇಕಾದ ಅಭ್ಯಾಸ, ಜ್ಞಾಪಕಶಕಿ, ಉತ್ಸಾಹ ಪ್ರತಿಭೆಗಳನ್ನು ಕುರಿತು ಹೇಳಿ, ಸಾಹಿತ್ಯದ ಅಧ್ಯಯನದಲ್ಲಿ ಗ್ರಂಥಸಂಪಾದನೆಯ ಅಗತ್ಯ ಮತ್ತು ಮಹತ್ವವನ್ನು ಚರ್ಚಿಸಬೇಕು.
- ಕನ್ನಡದ ಪ್ರಮುಖ ಕೃತಿಗಳು ಓದುಗರ ಕೈಸೇರಲು ನಿರಂತರವಾಗಿ ಶ್ರಮಿಸಿದ ಮಹನೀಯರ ಕಾರ್ಯಗಳ ಸಂಕ್ಷಿಪ್ತ ಪರಿಚಯ ನೀಡಿ ಕಿಟೆಲ್, ಬಿ.ಎಲ್.ರೈಸ್‌ರಂತಹ ವಿದೇಶೀ ವಿದ್ವಾಂಸರ ಮತ್ತು ಫ.ಗು.ಹಳಗಟ್ಟಿ, ಡಿ.ಎಲ್.ಎನ್ ರಂಥ ಕನ್ನಡದ ವಿದ್ವಾಂಸರ

| | | | |
|---|---|---|---|
| | | | ಕೊಡುಗೆಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಕೊಡಬೇಕು.<br><br>**ಫಲಿತಗಳು**<br>• ಸಾಹಿತ್ಯದ ಅಧ್ಯಯನಕ್ಕೆ ಮೂಲಕಾರಣವಾದ ಗ್ರಂಥಸಂಪಾದನೆಯ ಮಹತ್ವವನ್ನು ವಿದ್ಯಾರ್ಥಿಗಳು ಅರಿಯುತ್ತಾರೆ.<br>• ಗ್ರಂಥ ಸಂಪಾದಕನ ಅರ್ಹತೆ ಮತ್ತು ಆತನ ಸಾಹಿತ್ಯಕ–ಸಾಂಸ್ಕೃತಿಕ ಜವಾಬ್ದಾರಿಗಳನ್ನು ಗ್ರಹಿಸುತ್ತಾರೆ.<br>• ಕನ್ನಡ ಸಾಹಿತ್ಯದ ಲಿಖಿತ ಇತಿಹಾಸ ಮತ್ತು ಪ್ರಾಚೀನತೆಗಳ ಬಗೆಗೆ, ಕನ್ನಡದ ಮೇರು ಕೃತಿಗಳ ಬಗೆಗೆ ಹಾಗೂ ಅವುಗಳ ಮೂಲಕ ಕನ್ನಡ ನಾಡಿನ, ಭಾಷೆಯ ಸ್ವರೂಪದಲ್ಲಿ ಆದ ವಿಕಾಸವನ್ನು ಅರಿಯುತ್ತಾರೆ<br>• ಕಾಲಕಾಲಕ್ಕೆ ಭಾಷೆ ಮತ್ತು ಸಾಹಿತ್ಯದ ಮೇಲೆ ಉಂಟಾದ ವಿಭಿನ್ನ ಸಾಹಿತ್ಯ ಮತ್ತು ಸಾಹಿತ್ಯೇತರ ಪ್ರಭಾವಗಳು, ಅದರಿಂದಾದ ಬದಲಾವಣೆ, ಪಲ್ಲಟ,ಬೆಳವಣಿಗೆಗಳನ್ನು ತೌಲನಿಕವಾಗಿ ಅರಿತುಕೊಳ್ಳಲು ಈ ಪತ್ರಿಕೆಯು ಸಹಕಾರಿಯಾಗಿದೆ. |
| | | KAN C16 | **ಮಧ್ಯಕಾಲೀನ ಕನ್ನಡ ಸಾಹಿತ್ಯ** **(ಕ್ರೆಡಿಟ್ 04)**<br>**ಘಟಕ–1** ವೈಚಾರಿಕತೆ<br>**ಘಟಕ–2** ಅನುಭಾವ<br>**ಘಟಕ–3** ಸಾಮರಸ್ಯ<br>**ಘಟಕ–4** ಹಾಸ್ಯ ಪ್ರಜ್ಞೆ<br>**ಪರಾಮರ್ಶನ ಗ್ರಂಥಗಳು :**<br>1. ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ಸತ್ವ : ಎಂ.ಅಕಬರ ಅಲಿ<br>2. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ : ಎಂ.ಚಿದಾನಂದ ಮೂರ್ತಿ<br>3. ಯುಗಧರ್ಮ ಮತ್ತು ಸಾಹಿತ್ಯ ದರ್ಶನ : ಕೀರ್ತಿನಾಥ ಕುರ್ತಕೋಟಿ<br>4. ಪ್ರಾಚೀನ ಕನ್ನಡ ಸಾಹಿತ್ಯದ ಚಾರಿತ್ರಿಕ ಅಂಶಗಳು : ರಾ.ಗೌ. |

5. ಸಾಹಿತ್ಯ ಸಂಗಾತಿ : ಕೀರ್ತಿನಾಥ ಕುರ್ತಕೋಟಿ
6. ಅನುಭಾವ ಸಾಹಿತ್ಯ : ಎಚ್. ತಿಪ್ಪೇರುದ್ರಸ್ವಾಮಿ
7. ವಚನಸಾಹಿತ್ಯದಲ್ಲಿ ವೈಚಾರಿಕತೆ : ಎಚ್. ತಿಪ್ಪೇರುದ್ರಸ್ವಾಮಿ
8. ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ : ಬರಗೂರು ರಾಮಚಂದ್ರಪ್ಪ (ಸಂ)
9. ಸಾಹಿತ್ಯ ಮತ್ತು ಸಾಹಿತ್ಯ ಪ್ರಜ್ಞೆ: ಕೀರ್ತಿನಾಥ ಕುರ್ತಕೋಟಿ.
10. ಸಾಹಿತ್ಯ ಮತ್ತು ಸಮಾಜಶಾಸ್ತ್ರ : ಹೆಚ್.ವಿ ನಾಗೇಶ
11. ಶೂನ್ಯಸಂಪಾದನೆ ಮತ್ತು ಆಧುನಿಕ ಮೌಲ್ಯಗಳು : ಎಚ್.ತಿಪ್ಪೇರುದ್ರಸ್ವಾಮಿ
12. ಶೂನ್ಯಸಂಪಾದನೆ ಒಂದು ಅಧ್ಯಯನ : ಸಾ.ಶಿ.ಮರುಳಯ್ಯ

(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು)

**ಆಶಯಗಳು**

- ಈ ಪತ್ರಿಕೆಯು 12ನೆಯ ಶತಮಾನದಿಂದ 16ನೆಯ ಶತಮಾನದವರೆಗಿನ ವಿಶಾಲ ಕಾಲದ ಹರಹನ್ನು ಒಳಗೊಂಡ ಮಧ್ಯಕಾಲೀನ ಕನ್ನಡ ಸಾಹಿತ್ಯದ ಪರಿಚಯಕ್ಕೆ ಮೀಸಲಾಗಿದೆ.
- ರಾಜಕೀಯ ಮತ್ತು ಸಾಮಾಜಿಕ ಸ್ಥಿತ್ಯಂತರಗಳ ಕಾಲದಲ್ಲಿ ರಚನೆಯಾದ ಈ ಅವಧಿಯ ಸಾಹಿತ್ಯದ ಸ್ವರೂಪ ಸಂಕೀರ್ಣವೂ ಮತ್ತು ಸಮ್ಮಿಶ್ರವೂ ಆದುದು.
- ರಾಜಾಶ್ರಯಗಳ ಹಂಗಿಲ್ಲದೆ ಸ್ವತಂತ್ರವಾದ ಸಾಹಿತ್ಯವು ತನ್ನ ವಸ್ತು ಮತ್ತು ಅಭಿವ್ಯಕ್ತಿಗಳಲ್ಲಿ ಹೇಗೆ ಹೊಸತನವನ್ನು ಒಳಗು ಮಾಡಿಕೊಂಡಿತು ಎಂಬುದನ್ನು ಇಲ್ಲಿ ತಿಳಿಸಿಕೊಡಬೇಕು.
- ಪಂಡಿತರ ಅಂಕೆಯಿಂದ ಕಳಚಿಕೊಂಡ ಸಾಹಿತ್ಯ ಪರಿಣಾಮಕಾರಿಯಾಗಿ ಜನಸಾಮಾನ್ಯರನ್ನು ತಲುಪಿದ ಬಗೆ ಮತ್ತು ಬೀರಿದ ಪ್ರಭಾವಗಳನ್ನು ಚರ್ಚಿಸಬೇಕು.
- ಅಭಿವ್ಯಕ್ತಿಯಲ್ಲಿ ಈ ಕಾಲದ ಕವಿಗಳು ತೋರಿದ ನಿರ್ಭಯತೆ, ಸ್ವೋಪಜ್ಞತೆ ಮತ್ತು ಅದರ ಹಿಂದೆ ಪ್ರೇರಕ ಶಕ್ತಿಯಾಗಿ ನಿಂತಿರುವ ಭಕ್ತಿಯ ಸ್ವರೂಪವನ್ನು ವಿದ್ಯಾರ್ಥಿಗಳ ಗ್ರಹಿಕೆಗೆ ತರಬೇಕು.
- ವೈಚಾರಿಕ ಮತ್ತು ಆನುಭಾವಿಕ ಅಂಶಗಳು ಯುಗಧರ್ಮದಂತೆ ನಿಂತು ಅಂದಿನ ಸಾಹಿತ್ಯದಲ್ಲಿ ಒಡಮೂಡಿರುವ ರೀತಿಯನ್ನು ಪ್ರಾತಿನಿಧಿಕ ಪಠ್ಯಗಳ ಮೂಲಕ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡಬೇಕು.)

| | | | |
|---|---|---|---|
| | | | **ಫಲಿತಗಳು**<br>• ಈ ಪತ್ರಿಕೆಯ ಅಧ್ಯಯನವು 12ನೆಯ ಶತಮಾನದಲ್ಲಿ ನಡೆದ ಸಾಮಾಜಿಕ ಕ್ರಾಂತಿ ಮತ್ತು ಸಾಂಸ್ಕೃತಿಕ ಪಲ್ಲಟಗಳನ್ನು ಗ್ರಹಿಸಲು ವಿದ್ಯಾರ್ಥಿಗಳಿಗೆ ನೆರವಾಗುತ್ತದೆ.<br>• ಮಧ್ಯಕಾಲೀನ ಕನ್ನಡ ಸಾಹಿತ್ಯದ ಹಿನ್ನೆಲೆ, ವ್ಯಾಪ್ತಿ, ವಸ್ತುವೈವಿಧ್ಯತೆ, ಅಭಿವ್ಯಕ್ತಿಯ ವಿಭಿನ್ನ ಕ್ರಮಗಳು ಮತ್ತು ವಿವಿಧ ಸಾಹಿತ್ಯ ಪ್ರಕಾರಗಳನ್ನು ತಿಳಿಯುತ್ತಾರೆ.<br>• ಈ ಕಾಲಘಟ್ಟದ ಪ್ರಮುಖ ಕವಿಗಳ ಮತ್ತು ಅವರ ಚಿಂತನೆಗಳ ಸತ್ವವನ್ನು ಅರಿತುಕೊಳ್ಳುತ್ತಾರೆ.<br>• ನಡುಗನ್ನಡ ಭಾಷೆಯ ಸ್ವರೂಪವನ್ನು ವಿವರಿಸಿಕೊಳ್ಳುವಲ್ಲಿಯೂ ಈ ಪಠ್ಯಗಳು ಸಹಕಾರಿಯಾಗುತ್ತವೆ.) |
| | DSE | KAN E2 | **(ವಿದ್ಯಾರ್ಥಿಗಳು ಈ ಕೆಳಕಂಡ ನಾಲ್ಕು ಪತ್ರಿಕೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳಬೇಕು)**<br><br>A. **ಸಮೂಹ ಸಂವಹನ ಮಾಧ್ಯಮ** **(ಕ್ರೆಡಿಟ್ 03)**<br>**ಘಟಕ–1** ಸಂವಹನ ಕ್ರಿಯೆ–ಸಮೂಹ ಮಾಧ್ಯಮಗಳು<br>**ಘಟಕ–2** ಪತ್ರಿಕೆಗಳು<br>**ಘಟಕ–3** ಸಮೂಹ ಮಾಧ್ಯಮಗಳು ಮತ್ತು ಕನ್ನಡದ ಬಳಕೆ<br>1. ಸಮೂಹ ಮಾಧ್ಯಮಗಳು : ಎಸ್.ಆರ್.ಚಂದ್ರಶೇಖರ<br>2. ಆಧುನಿಕ ಸಮೂಹ ಮಾಧ್ಯಮಗಳು ಹಾಗೂ ಸಮಾಜ: ಡಿ.ಬಿ. ನಾಯಕ<br>3. ಸಂವಹನ ಕನ್ನಡ: ಡಿ.ವಿ.ಪರಮಶಿವಮೂರ್ತಿ<br>4. ಭಾರತೀಯ ಪತ್ರಿಕೋದ್ಯಮ ಪರಿಚಯ : ನಾಡಿಗ ಕೃಷ್ಣಮೂರ್ತಿ<br>5. ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ: ಟಿ.ಸಿ.ಪೂರ್ಣಿಮಾ<br>6. ಪತ್ರಿಕೋದ್ಯಮ ಪರಿಚಯ : ಡಿ.ಎಸ್.ಹಕಾರಿ<br>7. ಸಿನಿಮಾ ಯಂತ್ರ ಭಾಷೆ : ಕೆ.ವಿ.ಸುಬ್ಬಣ್ಣ |

8. ಸಿನಿಮಾ ತರಂಗ : ಅಬ್ದುಲ್ ರೆಹಮಾನ ಪಾಶ
9. ಬಾನುಲಿ ಬರವಣಿಗೆ : ಎನ್.ಕೆ.ಕುಲಕರ್ಣಿ
10. ಸಮೂಹ ಮಾಧ್ಯಮಗಳು : ಎಸ್.ದಿವಾಕರ
11. ಸಾಹಿತ್ಯ ಮತ್ತು ಸಮೂಹ ಮಾಧ್ಯಮಗಳು : ಬಸವರಾಜ ಸಬರದ (ಸಂ)
12. ಸಾಹಿತ್ಯ ಪತ್ರಿಕೆಯಾಗಿ ಸಂಕ್ರಮಣ : ಎಸ್.ಆರ್.ಹಿರೇಮಠ
13. ಜಾನಪದ ಸಂವಹನ : ಎಚ್.ಎಂ.ಮಹೇಶ್ವರಯ್ಯ

(ಈ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನಿತರ ಗ್ರಂಥ/ಲೇಖನಗಳನ್ನು ಗಮನಿಸುವುದು)

**ಆಶಯಗಳು**

- ಸಮೂಹ ಸಂಹನವು ಸಮೂಹ ಮಾಧ್ಯಮಗಳ ಮೂಲಕ ಜನಸಮೂಹಕ್ಕೆ ಮಾಹಿತಿಯನ್ನು ನೀಡುವ ಮತ್ತು ಮಾಹಿತಿ ವಿನಿಮಯ ಮಾಡುವ ಪ್ರಕ್ರಿಯೆಯಾಗಿದೆ.
- ಏಕಕಾಲಕ್ಕೆ ಬಹುಜನರನ್ನು ತಲುಪುವ ಸೌಲಭ್ಯವಿರುವುದರಿಂದ ಈ ತಂತ್ರಜ್ಞಾನ ನಿರ್ಮಿತ ಸಂವಹನ ಕ್ರಿಯೆಯು ಆಧುನಿಕ ಸಮಾಜದಲ್ಲಿ ಹೇಗೆ ಪರಿಣಾಮಕಾರಿಯಾಗಿದೆ ಎಂಬುದನ್ನು ಈ ಪತ್ರಿಕೆಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು.
- ದೂರದರ್ಶನ, ಆಕಾಶವಾಣಿ, ಪತ್ರಿಕೆ, ಸಿನಿಮಾ, ಜಾಹೀರಾತು ಮೊದಲಾದ ಸಮೂಹ ಸಂವಹನ ಮಾಧ್ಯಮಗಳ ಕಾರ್ಯವೈಖರಿಯ ಬಗೆಗೆ ಪ್ರಾತ್ಯಕ್ಷಿಕೆಗಳ ಮೂಲಕ ಅರಿವು ಮೂಡಿಸಬೇಕು.
- ಸಾಮೂಹಿಕ ಸಂವಹನ ಮಾಧ್ಯಮಗಳು ಸಾಂಪ್ರದಾಯಿಕ ಮಾಧ್ಯಮಗಳಿಗಿಂತ ಹೇಗೆ ಭಿನ್ನ ಎನ್ನುವುದನ್ನು ವಿವರಿಸಬೇಕು.
- ಈ ಹಿನ್ನೆಲೆಯಲ್ಲಿ ಜನರ ಭಾವನೆ ಮತ್ತು ಅಭಿಪ್ರಾಯಗಳನ್ನು ಇವು ನಿರ್ಮಿಸುವ ಮತ್ತು ನಿಯಂತ್ರಿಸುವ ಬಗೆಯನ್ನು ತಿಳಿಸಿಕೊಡಬೇಕು.
- ಕನ್ನಡ ಭಾಷಾ ಬಳಕೆಯ ಮತ್ತು ವಿಕಾಸದ ಹಾದಿಯಲ್ಲಿ ಸಮೂಹ ಮಾಧ್ಯಮಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕಾದ ಅಗತ್ಯದ ಬಗೆಗೆ ಮನದಟ್ಟು ಮಾಡಿಕೊಡಬೇಕು.

ಫಲಿತಗಳು

- ಈ ಪತ್ರಿಕೆಯು ಸಮೂಹ ಸಂವಹನದ ಅರ್ಥವನ್ನು ನಿರೂಪಿಸಿಕೊಳ್ಳಲು, ಸಂವಹನದ ಮೂಲ ತತ್ವಗಳು ಮತ್ತು ಕಾರ್ಯಗಳನ್ನು ವಿವರಿಸಿಕೊಳ್ಳಲು ಸಹಕಾರಿಯಾಗಿದೆ.
- ವಿವಿಧ ಸಮೂಹ ಮಾಧ್ಯಮಗಳು ಮತ್ತು ಸಾಮೂಹಿಕ ಸಂವಹನದಲ್ಲಿ ಅವುಗಳ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳಲು ನೆರವಾಗುತ್ತದೆ.
- ಸಮೂಹ ಮಾಧ್ಯಮ ಕ್ಷೇತ್ರವು ಕ್ಷಿಪ್ರವಾಗಿ ಬೆಳೆಯುತ್ತಿರುವ ಕ್ಷೇತ್ರವಾಗಿರುವುದರಿಂದ ಈ ಕ್ಷೇತ್ರಗಳ ಕಾರ್ಯವೈಖರಿಯ ತಿಳಿವಳಿಕೆಯು ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಅವರನ್ನು ಸ್ವಾವಲಂಬಿಗಳಾಗಿ ಮಾಡುವ ನಿಟ್ಟಿನಲ್ಲಿ ಶ್ರಮಿಸುತ್ತದೆ.
- ಕನ್ನಡದಂತಹ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ಮತ್ತು ವಿಕಾಸಕ್ಕೆ ಆಧುನಿಕ ಸಮೂಹ ಮಾಧ್ಯಮಗಳು ಹೊಸ ಆಯಾಮಗಳನ್ನು ಒದಗಿಸಿಕೊಟಟು ಭಾಷೆಯ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.

**ಅಥವಾ**

B. **ಕನ್ನಡ ಮಕ್ಕಳ ಸಾಹಿತ್ಯ** **(ಕ್ರೆಡಿಟ್ 03)**

**ಘಟಕ – 1** ಮಕ್ಕಳ ಸಾಹಿತ್ಯದ ಮಹತ್ವ ಮತ್ತು ಉದ್ದೇಶ

**ಘಟಕ – 2** ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯ

**ಘಟಕ – 3** ಆಧುನಿಕ ಕನ್ನಡ ಮಕ್ಕಳ ಸಾಹಿತ್ಯ

**ಪರಾಮರ್ಶನ ಗ್ರಂಥಗಳು:**


1. ಶಿಶು ಸಂಗಮೇಶ ಮತ್ತು ಪಳಕಳ ಸೀತಾರಾಮ ಭಟ್ಟ ಅವರ ಕೃತಿಗಳು
2. ತಟ್ಟು ಚಪ್ಪಾಳೆ ಪುಟ್ಟ ಮಗು: ಬೊಳುವಾರ ಮಹಮ್ಮದ ಕುಞ್ಞ
3. ಮಕ್ಕಳ ನಾಟಕಗಳು; ವೈದೇಹಿ
4. ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ – ಡಾ. ನಿರುಪಮಾ, ಕರ್ನಾಟಕ ಸಾಹಿತ್ಯ ಅಕಾಡೆಮಿ, 2004
5. ಮಕ್ಕಳ ಸಾಹಿತ್ಯ – ಡಾ.ಆನಂದ ಪಾಟೀಲ, ಕರ್ನಾಟಕ ಸಾಹಿತ್ಯ ಅಕಾಡೆಮಿ 2021
6. ಮಕ್ಕಳ ಸಾಹಿತ್ಯದ ಸ್ವರೂಪ – ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ 1992
7. ಮಕ್ಕಳ ಸಾಹಿತ್ಯ, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–9 – (ಸಂ) ಡಾ. ಬಸುಬೇವಿನಗಿಡದ, ಕನ್ನಡ ಸಾಹಿತ್ಯ

ಪರಿಷತ್ತು, ಬೆಂಗಳೂರು, 2015

8. ಮಕ್ಕಳ ಸಾಹಿತ್ಯ ಶತಮಾನ – (ಸಂ)ಆನಂದ ವಿ.ಪಾಟೀಲ, ನ.ರವಿಕುಮಾರ್ ಅಭಿನವ ಪ್ರಕಾಶನ 2001
9. ಅಲರು (ಮಕ್ಕಳ ಸಾಹಿತ್ಯ ಕುರಿತು..)– ಆನಂದ ವಿ.ಪಾಟೀಲ, ಅಭಿನವ ಪ್ರಕಾಶನ, ಬೆಂಗಳೂರು 2010
10. ಮುಗುಳು – ಆನಂದ ವಿ.ಪಾಟೀಲ ಅಭಿನವ ಪ್ರಕಾಶನ, ಬೆಂಗಳೂರು 2012
11. ಮಕ್ಕಳ ಸಾಹಿತ್ಯ ಒಂದು ಹೊರಳು ನೋಟ– (ಸಂ).ಸ.ರಾ.ಸುಳಕೂಡೆ, ಶ್ರೀ ಸಾಯಿ ಸಾಹಿತ್ಯ, 2019
12. ಕನ್ನಡದಲ್ಲಿ ಮಕ್ಕಳ ಸಾಹಿತ್ಯ – ಡಾ. ಬೆಳವಾಡಿ ಮಂಜುನಾಥ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ 2010
13. ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಇತ್ತೀಚಿನ ಒಲವುಗಳು– ಡಾ.ಆನಂದ ಪಾಟೀಲ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
14. ಮಕ್ಕಳ ಸಾಹಿತ್ಯದ ನೆಲೆ–ಬೆಲೆ – ಎಸ್.ವಿ. ಶ್ರೀನಿವಾಸರಾವ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 2006

ಆಶಯಗಳು

- ಮಕ್ಕಳ ಸಾಹಿತ್ಯ ಎಂದರೆ ಸರಳವಾದ ಪದ ಮತ್ತು ಅರ್ಥಗಳಿಂದ ಕೂಡಿದ ರಚನೆ.
- ಇದು ಮಕ್ಕಳ ಮನಸ್ಸನ್ನು ಅರಳಿಸಿ ಕುತೂಹಲ ಮೂಡಿಸಿ ಆ ಮೂಲಕ ಅವರ ಕಲ್ಪನೆ ಮತ್ತು ಭಾವನೆಗಳನ್ನು ರೂಪಿಸುವ ಬರವಣಿಗೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಪ್ರಾರಂಭದ ಬೇರುಗಳನ್ನು ಜಾನಪದ ಪರಂಪರೆಯಲ್ಲಿ ಕಾಣಬಹುದು.
- ಲಾಲಿಪದಗಳು, ಪ್ರಾಸಬದ್ಧವಾದ ಆಟದ ಪದಗಳು, ಒಗಟುಗಳು. ಕಥೆಗಳು, ಅದರಲ್ಲೂ ಅದ್ಬುತರಮ್ಯ ಕಥೆಗಳು, ಕಾಗಕ್ಕ ಗುಬ್ಬಕ್ಕನ ಕಥೆಗಳು ಇವೆಲ್ಲವೂ ಮಕ್ಕಳ ಸಾಹಿತ್ಯವೇ.
- ಈ ಹಿನ್ನೆಲೆಯಲ್ಲಿ ಮಕ್ಕಳ ಸಾಹಿತ್ಯದ ಇತಿಹಾಸ, ಮಹತ್ವ ಮತ್ತು ಉದ್ದೇಶಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡಬೇಕು
- ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ದುರ್ಗಸಿಂಹನ "ಕರ್ನಾಟಕ ಪಂಚತಂತ್ರ", ಕೃತಿಯು ಮಕ್ಕಳ ಸಾಹಿತ್ಯದ ಲಕ್ಷಣಗಳನ್ನು ಹೇಗೆ ಒಳಗೊಂಡಿದೆ ಎಂಬ ಅಂಶಗಳನ್ನು ಈ ಪತ್ರಿಕೆಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು.
- ಆಧುನಿಕ ಕಾಲದಲ್ಲಂತೂ ಹಲವಾರು ಸಾಹಿತ್ಯ ಪ್ರಕಾರಗಳ ಮೂಲಕ ವಿಸ್ತಾರಗೊಳ್ಳುತ್ತಾ ಬರುತ್ತಿರುವ ಕನ್ನಡ ಸಾಹಿತ್ಯವು ಮಕ್ಕಳ ಸಾಹಿತ್ಯ ರಚನೆಯಲ್ಲಿ ಮೂಡಿಸಿರುವ ಹೆಜ್ಜೆ ಗುರುತುಗಳನ್ನು ಗಂಗಾಧರ ಮಡಿವಾಳೇಶ್ವರ ತುರಮುರಿ, ಪಂಜೆ ಮಂಗೇಶರಾಯರು, ನಾ. ಕಸ್ತೂರಿ, ಶಿವರಾಮ ಕಾರಂತ, ಕುವೆಂಪು, ಫಳಕಳ ಸೀತಾರಾಮ ಭಟ್ಟ, ಆರ್. ಕಲ್ಯಾಣಮ್ಮ ಮೊದಲಾದ ಲೇಖಕರ ಪಠ್ಯಗಳೊಂದಿಗೆ ಪರಿಚಯ ಮಾಡಿಕೊಡಬೇಕು

**ಫಲಿತಗಳು**

- ಈ ಪತ್ರಿಕೆಯು ಮಕ್ಕಳ ಸಾಹಿತ್ಯದ ಬಗೆಗೆ ವಿದ್ಯಾರ್ಥಿಗಳಿಗಿರುವ ಜ್ಞಾನವನ್ನು ವಿಸ್ತರಿಸಿ, ಮಕ್ಕಳ ಸಾಹಿತ್ಯದ ಗುಣಲಕ್ಷಣಗಳನ್ನು ಗುರುತಿಸಿಕೊಳ್ಳಲು ನೆರವಾಗುತ್ತದೆ.
- ಕನ್ನಡದ ಪ್ರಮುಖ ಮಕ್ಕಳ ಸಾಹಿತಿಗಳ ಮತ್ತು ಅವರ ಕೃತಿಗಳ ಪರಿಚಯ ಮಾಡಿಕೊಳ್ಳುತ್ತಾರೆ.
- ಇದು ಕಥೆ, ಕವಿತೆ ಕಟ್ಟುವ ಕಲೆಗಾರಿಕೆಯನ್ನು ಕಲಿಸುತ್ತದೆ.
- ಆ ಮೂಲಕ ಅವರಲ್ಲಿ ಕಲ್ಪನಾಶಕ್ತಿಯನ್ನು ಉದ್ದೀಪಿಸಿ ಸೃಜನಶೀಲ ಬರವಣಿಗೆಯನ್ನು ಪ್ರೋತ್ಸಾಹಿಸುತ್ತದೆ.

**ಅಥವಾ**

C. **ಕನ್ನಡ ಪುಸ್ತಕೋದ್ಯಮ** **(ಕ್ರೆಡಿಟ್ 03)**

**ಘಟಕ – 1** ವಸಾಹತು ಕಾಲದ ಮುದ್ರಣ ಚರಿತ್ರೆ

**ಘಟಕ – 2** ಸಾಹಿತ್ಯ ಪ್ರಸರಣ ಮತ್ತು ಪುಸ್ತಕೋದ್ಯಮ

**ಘಟಕ – 3** ಆಧುನಿಕ ಮುದ್ರಣ ಪ್ರಕ್ರಿಯೆಗಳು

**ಪರಾಮರ್ಶನ ಗ್ರಂಥಗಳು:**

1. ಹೊಸಗನ್ನಡ ಅರುಣೋದು: ಶ್ರೀನಿವಾಸ ಹಾವನೂರು
2. ಲಾಭದಾಯಕ ಪುಸ್ತಕ ಉದ್ಯಮ– ಲೇಖನ ಪ್ರಜಾವಾಣಿ 11/12/2013
3. ಬುಕ್ಮಾರ್ಕ್ ಟಿ.ವಿ 9 ಕನ್ನಡ: ಪುಸ್ತಕೋದ್ಯಮ ಪೂರ್ಣಪ್ರಮಾಭಣದ ಉದ್ಯಮವಾಗಿಲ್ಲ –ಎ. ರಮೇಶ್ ಉಡುಪರೊಂದಿಗೆ ಮಾತುಕತೆ .–ಶ್ರೀದೇವಿಕಳಸದ 9/7/2021
4. ಈ ಹೊತ್ತಿನ ತುರ್ತು 'ಈ ಹೊತ್ತಿಗೆ'– ರಾಜಕುಮಾರ ಕುಲಕರ್ಣಿ, ಪ್ರಜಾವಾಣಿ ಲೇಖನ 11/8/2020
5. ಇ ಓದು ಹೊಸದು: ಇಬುಕ್ ಕ್ರಾಂತಿಗೆ ಸಿದ್ಧವಾಗುತ್ತಿರುವ ಕನ್ನಡ ಸಾಹಿತ್ಯ ಲೋಕ –ಎಸ್ ಕುಮಾರ್ 1/11/2020
6. ಪುಸ್ತಕ ಸಂಸ್ಕೃತಿಯ ಅಂಕಿತ: ಏಪ್ರಿಲ್23 ವಿಶ್ವ ಪುಸ್ತಕ ದಿನ– ಅಂಕಣ ಬರಹ ವಾರ್ತಾ ಭಾರತಿ,16/4/2016
7. ಹೆಚ್ಚಿನದನ್ನು ಸಾಧಿಸುವ ನಿರೀಕ್ಷೆ ನನಗಿಲ್ಲ. –ಪ್ರತಿಕ್ರಿಯೆ. ಅವಧಿ25/9/2010

8. ಕನ್ನಡ ಪುಸ್ತಕ ಪ್ರಕಾಶನ .ವಿಕಿಪಿಡಿಯಾ
9. ಕನ್ನಡ ಪುಸ್ತಕ ಪ್ರಾಧಿಕಾರದ ಅಂಗ ರಚನೆ ಕನ್ನಡ ಪುಸ್ತಕ ಪ್ರಾಧಿಕಾರ ವೆಬ್ ಸೈಟ್
10. ಪುಸ್ತಕಗಳು ಅಳಿವಿನಂಚಿನಲ್ಲಿವೆಯೇ–ಗುರುಪ್ರಸಾದ್ ಡಿ.ಎನ್. ನಾನು ಗೌರಿಕಾಂ.223/4/2021
11. 'ದಿ ಬುಕ್ ಬಿಸಿನೆಸ್: ವಾಟ್ ಎವೆರಿವನ್ ನೀಡ್ಸ ಟು ನೊ"– ಮೈಕ್ ಷಟ್ಜಕಿನ್ & ರೋಜರ್ ರಿಗೆರ್ಸ್–ಆಕ್ಸಪರ್ಡ್ ಯೂನಿವರ್ಸಿಟಿ, 2019.
12. ಪಬ್ಲಿಷಿಂಗ್ ಫಾರ್ ಪ್ರಾಫಿಟ್– ಥಾಮಸ್ ವುಲ್ಸ್, ಚಿಕಾಗೋ 2014.

**ಆಶಯಗಳು**

- ಪ್ರಸ್ತುತ ಪತ್ರಿಕೆಯಲ್ಲಿ ಕನ್ನಡ ಪುಸ್ತಕೋದ್ಯಮದ ಹುಟ್ಟು ಬೆಳವಣಿಗೆಯನ್ನು ಪರಿಚಯ ಮಾಡಿಕೊಡುವುದು.
- ಪುಸ್ತಕ ರಚನೆಯು ಉದ್ಯಮವಾಗಿ ಬೆಳೆದ ಬಗೆಯನ್ನು ಆಧುನಿಕ ತಂತ್ರಜ್ಞಾನದ ಸಂದರ್ಭದಲ್ಲಿ ಪುಸ್ತಕೋದ್ಯಮವು ಎದುರಿಸುತ್ತಿರುವ ಸಮಸ್ಯೆಗಳು ಸವಾಲುಗಳು ಯಾವುವು ಎಂಬುದನ್ನು ತಿಳಿಸಿಕೊಡುವ ಉದ್ದೇಶವನ್ನು ಹೊಂದಿದೆ.
- ಬದಲಾದ ಕಾಲಮಾನಕ್ಕೆ ತಕ್ಕಂತೆ ಮಾಡಿಕೊಳ್ಳಬೇಕಾಗಿರುವ ಬದಲಾವಣೆಗಳು, ಹೊಸ ತಂತ್ರಜ್ಞಾನ ಅಳವಡಿಕೆ ಇತ್ಯಾದಿ ಕುರಿತಂತೆ ತಿಳಿಸಿಕೊಡಲಾಗುವುದು.
- ಸಮಕಾಲೀನ ಪುಸ್ತಕ ಪ್ರಕಟಣಾಕಾರ್ಯದಲ್ಲಿ ಕಾಣಿಸಿಕೊಳ್ಳುತ್ತಿರುವ 'ಡಿಜಿಟಲ್ ಬುಕ್', 'ಆಡಿಯೋ ಪುಸ್ತಕಗಳು', ಆನ್ಲೈನ್ ಪ್ರಕಟಣೆಗಳು 'ಈ ಪುಸ್ತಕ' ಪ್ರಕಟಣಾ ಸಂಘ ಸಂಸ್ಥೆಗಳ ಹುಟ್ಟಿಕೊಳ್ಳುವಿಕೆಯ ಮೂಲಕ ಬದಲಾಗುತ್ತಿರುವ ಪುಸ್ತಕೋದ್ಯಮದ ಚಹರೆಗಳನ್ನು ಕುರಿತು ಅರಿವು ಮೂಡಿಸುವ ಆಶಯವನ್ನು ಹೊಂದಿದೆ.
- 'ಕೃತಿ ಚೌರ್ಯ', 'ಕೃತಿಸ್ವಾಮ್ಯ' ಇತ್ಯಾದಿ ಮಹತ್ವದ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಗುವುದು

**ಫಲಿತಗಳು**

- ಈ ಪತ್ರಿಕೆಯ ಅಧ್ಯಯನದಿಂದ ಪುಸ್ತಕ ಉದ್ಯಮಕ್ಕೆ ಅಗತ್ಯವಾದ ತಿಳುವಳಿಕೆಯನ್ನು ಪಡೆಯುತ್ತಾರೆ
- ಪುಸ್ತಕ ಪ್ರೀತಿಯೂ ವಿದ್ಯಾರ್ಥಿಗಳಲ್ಲಿ ಮೂಡುತ್ತದೆ. ಪುಸ್ತಕ ಪ್ರಕಟಣೆ, ಮಾರಾಟಕ್ಕೆ ಅಗತ್ಯವಾದ ಸಿದ್ಧತೆಗಳೇನು ಪುಸ್ತಕೋದ್ಯಮ ಎದುರಿಸುತ್ತಿರುವ ಸವಾಲುಗಳೇನೆಂಬುದನ್ನು ಅರಿಯುತ್ತಾರೆ.
- ಡಿಟಿಪಿ ಕಾರ್ಯ, ಪುಸ್ತಕ ಡಿಸೈನಿಂಗ್, ಪುಸ್ತಕಗಳ ಹೊದಿಕೆಗಳು ಮತ್ತು ಚಿತ್ರರಚನೆ, ವಿನ್ಯಾಸ ಮುಂತಾದ ಕೌಶಲ್ಯವನ್ನು ಕುರಿತು ತಿಳುವಳಿಕೆಯನ್ನು ಪಡೆಯುವುದರಿಂದ ಉದ್ಯಮಶೀಲತೆ ಮತ್ತು ಉದ್ಯೋಗಾವಕಾಶಗಳನ್ನು ಪಡೆಯುತ್ತಾರೆ.)

**ಅಥವಾ**

**D. ಕನ್ನಡ ಚಳುವಳಿಗಳು** **(ಕ್ರೆಡಿಟ್ 03)**

**ಘಟಕ – 1** ಕನ್ನಡ ಚಳುವಳಿಗಳ ಆಶಯ

**ಘಟಕ – 2** ಗೋಕಾಕ್ ಚಳುವಳಿ

**ಘಟಕ – 3** ಕನ್ನಡ : ವಾಸ್ತವತೆ ಮತ್ತು ಭವಿಷ್ಯ

**ಪರಾಮರ್ಶನ ಗ್ರಂಥಗಳು:**

1. ಕನ್ನಡ ಚಳುವಳಿಗಳು–ರಾ.ನಂ.ಚಂದ್ರಶೇಖರ್
2. ಕನ್ನಡ ಚಳುವಳಿ ಮತ್ತು ಚಂತನೆ–ಕಾ.ವೆಂ.ಶ್ರೀನಿವಾಸಮೂರ್ತಿ
3. ಭಾಷಾ ಚಳವಳಿಗಳು– ಸಿ.ಆರ್.ಗೋವಿಂದರಾಜು
4. ಗೋಕಾಕ್ ಗೋ ಬ್ಯಾಕ್ – ಚಂದ್ರಶೇಖರ ಪಾಟೀಲ
5. ಸಾಹಿತ್ಯ ಚಳುವಳಿಗಳು – ಶ್ರೀಧರ ಹೆಗಡೆ ಭದ್ರನ್ಅಭಿನವ ಪ್ರಕಾಶನ 2018.
6. ಗೋಕಾಕ್ ವರದಿ–ಡಾ ಸಿ.ಆರ್ ಗೋವಿಂದರಾಜು–ಕನ್ನಡ ಸಾಹಿತ್ಯ ಪರಿಷತ್ತು.
7. ಕರ್ನಾಟಕದ ಏಕೀಕರಣ ಹಾಗೂ ನಾಮಕರಣ– ಡಾ. ಸಿ.ಆರ್. ಗೋವಿಂದರಾಜು –2005

ಆಶಯಗಳು

- ಚಳುವಳಿ ಎಂಬುದೊಂದು ಸಾಂಸ್ಕೃತಿಕ ಪ್ರಕ್ರಿಯೆಂದು ತಿಳಿಸಬೇಕು
- ಯಾವುದೇ ನಾಡಿನ ಜನ ತಮ್ಮ ಭಾಷೆ ಸಂಸ್ಕøತಿ, ಅಸ್ತಿತ್ವಕ್ಕೆ ಧಕ್ಕೆ ಒದಗಿದಾಗ, ನೆಲ ಜಲ ಭಾಷೆ ಸಂಸ್ಕøತಿ ಸಂವೇದನೆಯನ್ನು ಕಾಯ್ದುಕೊಳ್ಳಲು, ಪ್ರಗತಿಯನ್ನು ಸಾಧಿಸಲು ಜಡ್ಡು ಕಟ್ಟಿದ ಸಮಾಜದಲ್ಲಿ ಒಂದು ಸಂಚಲನ ಮೂಡಿಸಲು ನಡೆಸುವ ಭೌತಿಕ ಹಾಗೂ ಬೌದ್ಧಿಕ ಹೋರಾಟವೇ ಚಳುವಳಿ.
- ಕನ್ನಡ ನಾಡಿನಲ್ಲಿ ಪ್ರಾಚೀನ ಮತ್ತು ಆಧುನಿಕ ಕಾಲಘಟ್ಟಗಳಲ್ಲಿ ಸಂಭವಿಸಿದ ಕನ್ನಡ ಮನಸ್ಸುಗಳು ರೂಪಿಸಿದ ವೈಚಾರಿಕ ಮತ್ತು ಸಾಮಾಜಿಕ, ಭಾಷಿಕ ಚಳುವಳಿಗಳ ಪರಿಚಯವನ್ನು ಮಾಡಿಕೊಡುವುದು
- ಜನಸಾಮಾನ್ಯರ ಸರಳ ಕನ್ನಡ ಭಾಷೆಯನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಮಾಡಿಕೊಂಡ 'ವಚನ ಚಳುವಳಿ', ಆಧುನಿಕ ಕಾಲದ ಸ್ವಾತಂತ್ರ್ಯ ಚಳುವಳಿ, ಪರಿಸರ ಚಳುವಳಿ ಜೊತೆಗೆ ಮೂಡಿದ ಹೊಸ ಸಾಹಿತ್ಯ ಸೃಷ್ಟಿ ಭಾಷಾವಾರು ಪ್ರಾಂತ್ಯಗಳ ರಚನೆಯ ಅಗತ್ಯತೆ ತಿಳಿಸಬೇಕು
- ಕರ್ನಾಟಕದ 'ಏಕೀಕರಣ ಚಳುವಳಿ', ಕನ್ನಡ ಪರ ಹೋರಾಟಗಾರರು ಮತ್ತು ಹೋರಾಟಗಳ ಬಗೆಗೆ, 'ಕನ್ನಡ

| | | | |
|---|---|---|---|
| | | | ಯುವ ಜನಸಭಾ', 'ಕನ್ನಡ ಜಾಗೃತ ಪರಿಷತ್' ಹಾಗೂ 'ಸಂಯುಕ್ತರಂಗ'ಗಳ ಕನ್ನಡ ಪರ ಹೋರಾಟಗಳ ಕುರಿತು ಅರಿವುಮೂಡಿಸುವುದು<br><br>ಫಲಿತಗಳು<br>• ಕನ್ನಡ ನಾಡಿನ ಏಕೀಕರಣ ಚಳುವಳಿ, ಕನ್ನಡ ಚಲನಚಿತ್ರ ರಂಗದ ಚಳುವಳಿ, ಮಹಾಜನ್ ಆಯೋಗ ಮತ್ತು ಚಳುವಳಿಗಾರರು, 'ಗೋಕಾಕ್ ಚಳುವಳಿ' ,'ಕನ್ನಡ ಶಕ್ತಿ ಕೇಂದ್ರ'ದ ಕನ್ನಡ ಪರ ಹೋರಾಟಗಳು ಇತ್ಯಾದಿಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡುತ್ತದೆ.<br>• ಕನ್ನಡಕ್ಕಾಗಿ ದುಡಿದ ಅನೇಕ ಕನ್ನಡ ಪರ ಹೋರಾಟಗಾರರಿಂದ ಸ್ಫೂರ್ತಿ ಪಡೆದು ಕನ್ನಡ ನಾಡು ನುಡಿ ಸಂಸ್ಕೃತಿಗಳ ಕುರಿತ ಹೆಮ್ಮೆ ಬೆಳೆಸಿಕೊಳ್ಳುತ್ತಾರೆ.<br>• ಕನ್ನಡತನ, ಕನ್ನಡ ಸಂಸ್ಕೃತಿ, ಭಾಷೆ ಕುರಿತು ಕನ್ನಡಿಗರಾಗಿ ತಮ್ಮ ಜವಾಬ್ದಾರಿ ಏನೆಂಬುದನ್ನು ಮನವರಿಕೆ ಮಾಡಿಕೊಳ್ಳುತ್ತಾರೆ |
| | Vocational | KAN V2 | A. **ಕರ್ನಾಟಕ ಕಲಾ ಪರಂಪರೆ** **(ಕ್ರೆಡಿಟ್ 03)**<br>**ಘಟಕ–1** ಕರ್ನಾಟಕ ಕಲಾ ಪರಂಪರೆ ಪರಿಚಯ<br>**ಘಟಕ–2** ಕಲಾ ಪ್ರಕಾರವೊಂದರ ಪ್ರಾಯೋಗಿಕ ಪರಿಚಯ<br>(ನೃತ್ಯ, ಸಂಗೀತ, ಜನಪದ ಮುಂತಾದ ಯಾವುದಾದರೂ ಒಂದು ಪ್ರಕಾರದ ಪ್ರಾಯೋಗಿಕ ಅಧ್ಯಯನ ಹಾಗೂ ಪ್ರಬಂಧ ರಚನೆ, ಸಾಕ್ಷ್ಯಚಿತ್ರ ನಿರ್ಮಾಣ, ಪ್ರದರ್ಶನ)<br>**ಘಟಕ–3** ಸ್ಥಳೀಯ ಕಲಾವಿದ ಹಾಗೂ ಕಲಾ ಪ್ರಕಾರದ ವಿಶೇಷ ಅಧ್ಯಯನ<br>**ಪರಾಮರ್ಶನ ಗ್ರಂಥಗಳು:**<br>1. ಕರ್ನಾಟಕದ ಜನಪದ ಚಿತ್ರಕಲೆ –ಡಾ. ಎಸ್ ಸಿ ಪಾಟೀಲ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ.<br>2. ಕರ್ನಾಟಕ ಕಲಾ ದರ್ಶನ.–ಎಂ.ಎಚ್ ಕೃಷ್ಣಯ್ಯನವಕರ್ನಾಟಕ, 2010.<br>3. ಉತ್ತರ ಕರ್ನಾಟಕದ ಜನಪದ ಕಲೆಗಳು. 'ಇ.ಪುಸ್ತಕ; ಕಣಜ<br>4. ಕರಾವಳಿ ಕರ್ನಾಟಕದ ಜನಪದ ಕಲೆಗಳು– ಚಕ್ಕರೆ ಶಿವಶಂಕರ್. ಕಣಜ 'ಇ ಪುಸ್ತಕ'<br>5. ಕನಾಟಕದ ಜನಪದ ಕಲೆಗಳ ಕೋಶ–ಹಿಚಿ ಬೋರಲಿಂಗಯ್ಯ–ಕನ್ನಡ ವಿ.ವಿ. ಪ್ರಸಾರಾಂಗ. 2002<br>6. ಕರ್ನಾಟಕ ರಂಗ ಪರಂಪರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ'ಇ ಪುಸ್ತಕ ' ಕಣಜ 7/7/2017 |

**ಆಶಯಗಳು**

- ಕನ್ನಡ ನಾಡಿನ ಕಲಾಪ್ರಕಾರಗಳು, ದೇಸೀ ಸಂಸ್ಕೃತಿಯನ್ನು ತಿಳಿಸಬೇಕು
- ಸ್ಥಳೀಯವಾದ ವಿವಿಧ ಪ್ರದರ್ಶನ ಕಲೆಗಳನ್ನು, ಕಲಾವಿದರು, ಕಲಾ ಸಮುದಾಯಗಳ ಪರಿಚಯದ ಮೂಲಕ ಪ್ರಾದೇಶಿಕ ವೈವಿಧ್ಯತೆ ಅನನ್ಯತೆಗಳ ಅರಿವು ಮೂಡಿಸುವುದು.
- ಮರೆಯಾಗುತ್ತಿರುವ ಸ್ಥಳೀಯ ಕಲೆಗಳ ಅರಿವು ಮೂಡಿಸುವುದು, ಹೊಸ ತಲೆಮಾರಿನವರೊಂದಿಗೆ ಹಳೆ ತಲೆ ಮಾರಿನ ಜನಸಂಸ್ಕೃತಿಯನ್ನು ಬೆಸೆಯುವುದು
- ಹಿರಿಯ ಕಿರಿಯ ಕಲಾವಿದರ ಒಡನಾಟವನ್ನು ಹೆಚ್ಚಿಸಿ ಕಲಾ ನೈಪುಣ್ಯತೆಯನ್ನು ಉಳಿಸುವುದು, ಹೊಸ ತಲೆಮಾರಿಗೆ ತಲುಪಿಸುವುದು ಈ ಅಧ್ಯಯನದ ಮುಖ್ಯಉದ್ದೇಶವಾಗಿದೆ.

ಫಲಿತಗಳು

- ಈ ಅಧ್ಯಯನದಿಂದ ಅನೇಕ ಅಜ್ಞಾತ ಸ್ಥಳೀಯ ಕಲಾವಿದರು ಬೆಳಕಿಗೆ ಬರುತ್ತಾರೆ
- ತಮ್ಮ ತಮ್ಮ ಪ್ರದೇಶ ವ್ಯಾಪ್ತಿಯ ಸ್ಥಳೀಯ ವೈವಿಧ್ಯತೆಗಳನ್ನು ವಿದ್ಯಾರ್ಥಿ ಸಮೂಹವು ಅರಿಯುತ್ತದೆ.
- ಅದನ್ನು ಉಳಿಸಿ ಮುಂದಿನ ತಲೆಮಾರಿಗೆ ಕೊಂಡೊಯ್ಯಬೇಕೆಂಬ ಬದ್ಧತೆ ಪರಂಪರೆಯ ಪ್ರಜ್ಞೆ ವಿದ್ಯಾರ್ಥಿಗಳಲ್ಲಿ ಮೂಡುತ್ತದೆ
- ಸಂದರ್ಶನಗಳು ಸಾಕ್ಷ್ಯಚಿತ್ರಗಳು, ಸಂಶೋಧನಾ ಪ್ರಬಂಧ ರಚನೆಗಳಿಗೆ ಅವಕಾಶವಿರುತ್ತದೆ.
- ಹೊಸ ತಲೆಮಾರಿನವರಿಗೆ ತರಗತಿ ಮತ್ತು ಕ್ಷೇತ್ರಗಳನ್ನು ಬೆಸೆಯುವುದರ ಮೂಲಕ ತತ್ವ ಮತ್ತು ಪ್ರಯೋಗಗಳೆರಡರ ಕಲಿಕೆಯು ಹೆಚ್ಚು ಪ್ರಯೋಜನಕಾರಿಯಾಗಿರುತ್ತದೆ.
- ನಮ್ಮ ಪರಂಪರೆಯ ಕಲೆಗಳನ್ನು ಯುವ ಜನರು ಕಲಿತು ಕಲಾವಿದರಾಗುವ ಅವಕಾಶ ಸಂಶೋಧಕರಾಗುವ ಅವಕಾಶ ಒದಗುತ್ತದೆ.
- ಕೌಶಲ್ಯಾಭಿವೃದ್ಧಿಯಾಗಿ ಉದ್ಯೋಗ ಅವಕಾಶಗಳೂ ಉಂಟಾಗುತ್ತವೆ.

**ಅಥವಾ**

B. **ಕನ್ನಡ ಕರಡಚ್ಚು ತಿದ್ದುವಿಕೆ (ಪ್ರೂಫ್ ರೀಡಿಂಗ್)** **(ಕ್ರೆಡಿಟ್ 03)**

**ಘಟಕ – 1** ಕನ್ನಡ ಕರಡಚ್ಚು ತಿದ್ದುವಿಕೆ – ಅಗತ್ಯತೆ

**ಘಟಕ – 2** ಕರಡಚ್ಚು ತಿದ್ದುವಿಕೆಯಲ್ಲಿ ಬಳಸುವ ಚಿಹ್ನೆಗಳು

**ಘಟಕ – 3** ಕರಡಚ್ಚು – ಪ್ರಾಯೋಗಿಕ ತರಗತಿಗಳು (ಕರಡಚ್ಚು ತಿದ್ದುವ ವಿಧಾನವನ್ನು ಪ್ರಾಯೋಗಿಕವಾಗಿ ಹೇಳಿಕೊಡಬೇಕು)

**ಪರಾಮರ್ಶನ ಗ್ರಂಥಗಳು:**

1.ಭಾಷಾ ಕೌಶಲ್ಯ ಮತ್ತು ಕರಡು ತಿದ್ದುವಿಕೆ ಕಮ್ಮಟ ಗೊಲ್ಯ ವಿಡಿಯೋಗಳು. ಕನ್ನಡ ಸಾಹಿತ್ಯ ಅಕಾಡೆಮಿ ಹಾಗೂ ಸ್ವಾನ್. ಡಬ್ಲ್ಯೂ ಡಬ್ಲ್ಯೂ ಡಬ್ಲ್ಯೂ. ಯುಟ್ಯೂಬ್.ಕಾಮ್

2. ಕರಡು ತಿದ್ದುವಿಕೆ.ಮೈಸೂರು ವಿಶ್ವವಿದ್ಯಾಲಯ ವಿಶ್ವ ಕೋಶ. ವಿಕಿ ಸೋರ್ಸ್ 22/12/2015

3.ಪುಸ್ತಕ ಪ್ರಪಂಚ (ಸಂ) ಸಿದ್ದಲಿಂಗಯ್ಯ& ಜೆ ಎನ್ ಶಾಮರಾವ್ .ಕಾಮಧೇನುಪುಸ್ತಕ ಭವನ.2012.

**ಆಶಯಗಳು**

- ಪ್ರಸ್ತುತ ಪತ್ರಿಕೆಯಲ್ಲಿ ಬರಹ ಸಂಸ್ಕೃತಿಯ ಉಗಮ ವಿಕಾಸದ ಜೊತೆಗೆ ಬರಹದಲ್ಲಿ ಉಂಟಾಗಬಹುದಾದ ದೋಷಗಳನ್ನು ತಿದ್ದುಪಡಿ ಮಾಡುವ ಪದ್ಧತಿಯು ಹೇಗೆ ಪ್ರಚುರಗೊಂಡಿತು ಎಂಬುದನ್ನು ತಿಳಿಸಿಕೊಡುವುದು
- ಬದಲಾದ ಬರಹದ ಸಾಮಗ್ರಿಗಳೊಂದಿಗೆ ಕರಡುತ್ತಿದ್ದುವ ಕ್ರಮದಲ್ಲಿ ಉಂಟಾಗಿರುವ ಬದಲಾವಣೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಉದ್ದೇಶವಿದೆ.
- ಅಲ್ಲದೆ ಬರಹದಲ್ಲಿ ಕರಡು ಪ್ರತಿಗಳನ್ನು ತಿದ್ದುಪಡಿ ಮಾಡುವಾಗ ಬಳಸಬೇಕಾದ ಕ್ರಮಬದ್ಧವಾದ ಚಿಹ್ನೆಗಳನ್ನು, ಅವುಗಳನ್ನು ಬಳಸಬೇಕಾದ ಸಂದರ್ಭಗಳನ್ನು ಆಯಾ ಚಿಹ್ನೆಗಳ ಅರ್ಥ, ಇಂಗಿತಗಳನ್ನು ಪ್ರಾಯೋಗಿಕ ತರಬೇತಿಯೊಂದಿಗೆ ಕಲಿಸಿಕೊಡುವುದು ಈ ಅಧ್ಯಯನದ ಉದ್ದೇಶವಾಗಿದೆ

ಫಲಿತಗಳು

- ಈ ಅಧ್ಯಯನ ಹಾಗೂ ತರಬೇತಿಯು ವಿದ್ಯಾರ್ಥಿಯಲ್ಲಿ ವಿಶಿಷ್ಟವಾದ ಭಾಷಾ ಕೌಶಲ್ಯವನ್ನು ಬೆಳೆಸುತ್ತದೆ.

- ಭಾಷಾ ದೋಷಗಳನ್ನು ಗುರುತಿಸುವ ಹಾಗೂ ಅಗತ್ಯ ಮಾರ್ಪಾಟುಗಳನ್ನು ಮಾಡುವ, ಗುಣಿತಾಕ್ಷರ, ಹ್ರಸ್ವ–ದೀರ್ಘಧ್ವನಿಗಳು, ಪದ, ವಾಕ್ಯ, ವಾಕ್ಯಗುಚ್ಛಗಳು, ಶಿರೋನಾಮೆ, ಪದಚ್ಛೇದ, ಅಕ್ಷರಬಂಧ, ಸೇರ್ಪಡೆ, ವರ್ಜಿಸುವಿಕೆ, ಸ್ಥಾನಪಲ್ಲಟ ಮುಂತಾದ ಅಗತ್ಯ ಕರಡುತ್ತಿದ್ದುವ ಕೌಶಲ್ಯವನ್ನು ಕಲಿಯುವುದರಿಂದ ಪತ್ರಿಕೋದ್ಯಮ, ಪುಸ್ತಕೋದ್ಯಮ, ವಿದ್ಯುನ್ಮಾನ ಮಾಧ್ಯಮಗಳಲ್ಲಿ, ವಾಣಿಜ್ಯ ಜಾಹೀರಾತು ಉದ್ಯಮಗಳಲ್ಲಿ ಉದ್ಯೋಗ ಅವಕಾಶಗಳು ಉಂಟಾಗುತ್ತವೆ.

**ಅಥವಾ**

C. **ಛಾಯಾಚಿತ್ರ ಕಲೆ (ಫೋಟೋಗ್ರಫಿ)** **(ಕ್ರೆಡಿಟ್ 03)**

**ಘಟಕ – 1** ಛಾಯಾಚಿತ್ರ ಕಲೆಯ ಪರಂಪರೆ

**ಘಟಕ – 2** ಸ್ಥಿರ ಛಾಯಾಚಿತ್ರಗ್ರಹಣ (ಉತ್ತಮ ಚಿತ್ರಗ್ರಹಣಕ್ಕೆ ಗಮನಿಸಬೇಕಾದ ಅಂಶಗಳು)

**ಘಟಕ – 3** ಚಲನಚಿತ್ರ ಛಾಯಾಗ್ರಹಣ (ತತ್ತ್ವ – ಪ್ರಯೋಗ)

**ಪರಾಮರ್ಶನ ಗ್ರಂಥಗಳು:**

1. ಫೋಟೋಗ್ರಫಿಯಲ್ಲಿ ಫ್ಯೂಚರ್ ಇದೆಯಾ –.ಎಸ್.ಕೆ.ಕನ್ನಡ.ಕಾಮ್
2. ಸಿನೆಮೆಟೋಗ್ರಫಿ 101: ಟೆನ್ ಎಸೆನ್ಷಿಯಲ್ ಲೆಸೆನ್ಸ್ ಪಾರ್ ಬಿಗಿನರ್ಸ್ – ಫಿಲ್ಮ್ ಸ್ಕೂಲ್ ಆನ್ ಲೈನ್. ಇ.ಪುಸ್ತಕ.

ಆಶಯಗಳು

- ಈ ಪತ್ರಿಕೆಯಲ್ಲಿ ಛಾಯಾ ಚಿತ್ರಕಲೆಯ ಉಗಮ ವಿಕಾಸ ಸ್ವರೂಪ ಲಕ್ಷಣಗಳನ್ನು ತಿಳಿಸಿಕೊಡಲಾಗುವುದು
- ಸ್ಥಿರಛಾಯಾ ಚಿತ್ರಗ್ರಹಣವನ್ನು ಹವ್ಯಾಸವಾಗಿ ಉದ್ಯೋಗವಾಗಿ ಉದ್ಯಮವಾಗಿ ರೂಪಿಸಿಕೊಳ್ಳಲು ಅಗತ್ಯವಾದ ತರಬೇತಿಗಳನ್ನು ನೀಡುವುದು ಇದರ ಆಶಯವಾಗಿದೆ.
- ಸ್ಥಿರಛಾಯಾಚಿತ್ರಕ್ಕೆ ಅಗತ್ಯವಾದ ಬೆಳಕು ನೆರಳಿನ ಸಂಯೋಜನೆ, ಹತ್ತಿರ ದೂರಗಳ ಸಂಯೋಜನೆ, ವಿಶೇಷ ಎಫೆಕ್ಟ್‌ಳು, ಗ್ರಾಫಿಕ್ ಕಲೆ ಸಂಯೋಜನೆ, ಹಿನ್ನೆಲೆಯನ್ನು ಸಜ್ಜುಗೊಳಿಸುವಿಕೆ, ಶೀರ್ಷಿಕೆ ನೀಡುವಿಕೆ ಇತ್ಯಾದಿ ಛಾಯಾಚಿತ್ರಕಲೆಯ ಅಗತ್ಯ ಅರಿವು ಮತ್ತು ಕೌಶಲ್ಯಗಳ ಬಗೆಗೆ ತಿಳಿಸಿ ಕೊಡುವುದು.
- ಇದರೊಂದಿಗೆ ಚಲನಚಿತ್ರ ಛಾಯಾಗ್ರಹಣ ಸಂಬಂಧಿತವಾದ ಅನನ್ಯ ಮಾಹಿತಿ ಅರಿವು ಮೂಡಿಸುವುದರೊಂದಿಗೆ ಕಿರು ಚಿತ್ರಗಳ ತಯಾರಿಕೆ, ಧ್ವನಿಗ್ರಹಣ ಛಾಯಾಚಿತ್ರಗ್ರಹಣ, ಡಬ್ಬಿಂಗ್, ಧ್ವನಿ ಮತ್ತು ಚಿತ್ರ ಎಡಿಟಿಂಗ್ ವಿಶೇಷ ಸಂಯೋಜನೆಗಳನ್ನು

ವಿದ್ಯಾರ್ಥಿಗಳು ಕಲಿಯುವಂತೆ ಮಾಡುವುದು ಇದರ ಉದ್ದೇಶವಾಗಿದೆ.

ಫಲಿತಗಳು

- ಈ ಪತ್ರಿಕೆಯ ಅಧ್ಯಯನ ಹಾಗೂ ಅಭ್ಯಾಸಗಳಿಂದ ಸ್ಥಿರ ಛಾಯಾಚಿತ್ರಗ್ರಹಣ ಹಾಗೂ ಚಲನಚಿತ್ರ ಗ್ರಹಣದ ಕೌಶಲ್ಯವನ್ನು ಪರಿಣತಿಯನ್ನು ವಿದ್ಯಾರ್ಥಿಗಳು ಪಡೆಯುತ್ತಾರೆ.
- ಈ ಕೌಶಲ್ಯಪೂರ್ಣ ಕಾರ್ಯ ವೈಖರಿಗೆ ಹೆಚ್ಚಿನ ಉದ್ಯೋಗಾವಕಾಶ, ಕಿರುತೆರೆ ಹಾಗೂ ಹಿರತೆರೆ ಎರಡರಲ್ಲೂ ದೊರಕುತ್ತವೆ.
- ಸಾಕ್ಷಚಿತ್ರಗಳು, ಕಿರು ಚಿತ್ರಗಳು, ಜಾಹೀರಾತು ಚಿತ್ರಗಳ ತಯಾರಿ, ವಿಡಿಯೋ ಗ್ರಾಫಿಕ್ ಉದ್ಯಮಕ್ಕೆ ಅಗತ್ಯವಾದ ಅರಿವನ್ನು ಕೌಶಲ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬಹುದಾಗಿದೆ.

**ಅಥವಾ**

**D. ಅನುವಾದ ಸಾಹಿತ್ಯ** **(ಕ್ರೆಡಿಟ್ 03)**

**ಘಟಕ – 1** ಕನ್ನಡ ಅನುವಾದ ಸಾಹಿತ್ಯ ಪರಂಪರೆ ಮತ್ತು ಅನುವಾದದ ಅಗತ್ಯತೆ

**ಘಟಕ – 2** ಅನುವಾದದ ಸ್ವರೂಪ, ಲಕ್ಷಣ ಮತ್ತು ಪ್ರಕಾರಗಳು

**ಘಟಕ – 3** ಅನುವಾದ – ಪ್ರಾಯೋಗಿಕ ತರಗತಿಗಳು (ಅನ್ಯ ಭಾಷೆಯಿಂದ ಕನ್ನಡಕ್ಕೆ, ಕನ್ನಡದಿಂದ ಅನ್ಯ ಭಾಷೆಗೆ ಅನುವಾದಿಸುವುದನ್ನು ಪ್ರಾಯೋಗಿಕವಾಗಿ ಹೇಳಿಕೊಡಬೇಕು)

**ಪರಾಮರ್ಶನ ಗ್ರಂಥಗಳು:**


1. ನಾಗವಲ್ಲಿ, ಎಚ್.ಎಲ್.ನಾಗೇಗೌಡರ ಅಭಿನಂದನ ಗ್ರಂಥ
2. ಭಾಷಾಂತರ ಕಲೆ, ಪ್ರಧಾನ ಗುರುದತ್ತ
3. ಭಾಷಾಂತರ, ಓ.ಎಲ್. ನಾಗಭೂಷಣಸ್ವಾಮಿ
4. ಭಾಷಾಂತರ ಪ್ರವೇಶಿಕೆ, ಎಂ.ಉಷಾ
5. ಅನುವಾದ ಸಂಕಥನ, ಕೆ.ಸಿ.ಶಿವಾರೆಡ್ಡಿ, ಡಾ.ಪ್ರದೀಪ್, ಡಾ.ಲಕ್ಷ್ಮೀಕಾಂತ
6. ಅನುವಾದ ಅನುಸೃಷ್ಟಿ ರೂಪಾಂತರ, ಮೋಹನ ಕುಂಟಾರ್
7. ಭಾಷಾಂತರ ಒಂದು ಕಲಾತ್ಮಕ ಅಭಿವ್ಯಕ್ತಿ, ಎಸ್.ಆರ್.ಭಟ್
8. ಭಾಷಾಂತರ ಸಾಂಸ್ಕೃತಿಕ ನೆಲೆಗಳು, ಕರೀಗೌಡ ಬೀಚನಹಳ್ಳಿ


ಆಶಯಗಳು

- ಜಾಗತೀಕರಣದ ಪ್ರಸ್ತುತ ಕಾಲಘಟ್ಟದಲ್ಲಿ ಬಹುಭಾಷಿಕತೆ ಮತ್ತು ಭಾಷಾಂತರ ಕೌಶಲ್ಯಗಳು ಔದ್ಯೋಗಿಕ ಕ್ಷೇತ್ರದಲ್ಲಿ ಒಂದು

| | | | |
|---|---|---|---|
| | | | ವರದಾನವೇ ಸರಿ.<br>• ಪ್ರಸ್ತುತ ಪತ್ರಿಕೆಯ ಅಧ್ಯಯನದಲ್ಲಿ ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿರುವ ಪ್ರಾಕೃತ ಸಂಸ್ಕೃತದ ಅನುವಾದಗಳು, ಆಧುನಿಕ ಕಾಲಘಟ್ಟಗಳಲ್ಲಿ ಕಾಣಿಸಿಕೊಂಡಿರುವ ಬಂಗಾಳಿ ಸಂಸ್ಕೃತ ಇಂಗ್ಲಿಷ್ ಗ್ರೀಕ್ ಮರಾಠಿ ಹಾಗೂ ಇತರ ನೆರೆಹೊರೆ ಭಾಷೆಗಳಿಂದ ಕನ್ನಡಕ್ಕೆ ನಡೆದ ಅನುವಾದದ ಪಕ್ರಿಯೆ ಹಾಗೂ ಪರಂಪರೆಗಳ ಬಗೆಗೆ ಸ್ಥೂಲ ಪರಿಚಯ ಮಾಡಿಕೊಡುವುದು,<br>• ಅನುವಾದದ ವ್ಯಾಖ್ಯೆಗಳು, ಅನುವಾದದ ಹಲವು ಪ್ರಕಾರಗಳು ಅವುಗಳ ಸ್ವರೂಪ ಲಕ್ಷಣಗಳನ್ನು ತಿಳಿಸಿಕೊಡುವುದು ಈ ಪತ್ರಿಕೆಯ ಉದ್ದೇಶವಾಗಿದೆ.<br><br>ಫಲಿತಗಳು<br>• ಪ್ರಾಯೋಗಿಕ ತರಗತಿಗಳ ಮೂಲಕ ಪದಾನುವಾದ, ವಾಕ್ಯಾನುವಾದ, ವಾಕ್ಯ ಗುಚ್ಛಗಳ ಅನುವಾದ, ವ್ಯಾವಹಾರಿಕ ಭಾಷಾ ಅನುವಾದ, ಸೃಜನಶೀಲ ಬರಹಗಳ ಅನುವಾದ, ಕಛೇರಿ ಟಿಪ್ಪಣಿಗಳ ಅನುವಾದ, ಶೀರ್ಷಿಕೆಗಳ ಅನುವಾದ, ವಾಣಿಜ್ಯ ಜಾಹೀರಾತುಗಳ ಅನುವಾದ, ಸಂಭಾಷಣೆಗಳನ್ನು ಅನುವಾದ ಮಾಡುವ ಕ್ರಮಗಳನ್ನು ಅಗತ್ಯವಾದ ನಿಯಮಗಳೊಂದಿಗೆ ವಿದ್ಯಾರ್ಥಿಗಳು ಕಲಿಯುತ್ತಾರೆ<br>• ಇದರಿಂದ ಅನುವಾದಕರಾಗಿ, ಆಡಳಿತ ಕ್ಷೇತ್ರ, ನ್ಯಾಯಾಲಯಗಳು, ಪುಸ್ತಕೋದ್ಯಮ, ಪತ್ರಿಕೋದ್ಯಮ, ವಿವಿಧ ವಿದ್ಯುನ್ಮಾನ ಮಾಧ್ಯಮಗಳು, ಧಾರಾವಾಹಿ, ಚಲನಚಿತ್ರ ಡಬ್ಬಿಂಗ್ ಕ್ಷೇತ್ರ, ಜಾಹೀರಾತು ಕ್ಷೇತ್ರಗಳಲ್ಲಿ, ರಾಜ್ಯ ಅಂತರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗಾವಕಾಶಕ್ಕೆ ಅಗತ್ಯವಾದ ಕೌಶಲ್ಯಗಳನ್ನು ವಿದ್ಯಾರ್ಥಿಗಳು ಪಡೆಯುತ್ತಾರೆ. |